## ಅಧ್ಯಾಯ 2

# ದೇವ ಸಾಕ್ಷಿಯನ್ನ ಪ್ರಸಿದ್ಧಿಪಡಿಸುವದು

ಪೌಲನು ಸಭೆಯಲ್ಲಿ ಭೇದವನ್ನು ಎದುರಿಸುತ್ತಿರುವ ಹಾಗೆ, ಅವನು ಕೆಳಗಿನ ಕಾರಣಗಳನ್ನು ಗುರುತಿಸಲು ಪ್ರಾರಂಭಿಸಿದನು: ಗೊಂದಲವನ್ನು ಎಬ್ಬಿಸುವ ಗುಂಪುಗಳು ಕೆಲವು ಪ್ರಸಂಗಿಗಳನ್ನು ಮತ್ತು ಅವರ ಬೋಧನೆಯ ಶೈಲಿಯನ್ನು ಆಧರಿಸಿ ತಮ್ಮ ಆದ್ಯತೆಗಳನ್ನು ರಚಿಸಿಕೊಂಡರು. ಅವರು ಕೆಳ ದರ್ಜೆಯ ತತ್ವಜ್ಞಾನಿಗಳ ಕುರಿತು ಅಳವಡಿಸಿಕೊಂಡ ಜನಪ್ರಿಯ ಅಳತೆಯಿಂದ ಅಪೊಸ್ತಲರ ಸಾಕ್ಷಿಗಳನ್ನು ಮೌಲ್ಯಮಾಪನ ಮಾಡುವದಕ್ಕೆ ಸಾಕ್ಷಿಯಾಗಿ ಉಪಯೋಗಿಸಿದರು. ಇದು ಸಭೆಯಲ್ಲಿ ಗಲಭೆಗೆ ಕಾರಣವಾಯಿತು. ಪೌಲನು ಜ್ಞಾನದ ಕುರಿತು ಲೋಕದ ತಿಳುವಳಿಕೆಯನ್ನು, ದೇವರ ನಿರ್ಣಯಿಸಿರುವ ಜ್ಞಾನಕ್ಕೆ ಇರುವ ವ್ಯತ್ಯಾಸವನ್ನು ಕಂಡುಕೊಳ್ಳಲು ಮನಸ್ಸು ಮಾಡಿದನು. ದೇವರು ತನ್ನ ಕೃಪೆಯ ಬಲವನ್ನು ಕ್ರೂಜೆಯಲ್ಲಿ ಯೇಸುವಿನ ಮರಣದ ಮೂಲಕ ಪ್ರಕಟಿಸಿದ್ದಾನೆ. ಬಲವು ಅಪೇಕ್ಷಿಸುವಂತೆ ದೇವರ ಜ್ಞಾನ, ಯಾರು ಲೋಕದಲ್ಲಿ ಬಲ ಮತ್ತು ಪ್ರಭಾವ ಅಧಿಕಾರ ನಡೆಸಬೇಕೆಂದು ಬಯಸುತ್ತಾರೋ ಅವರಿಗೆ ಸಣ್ಣ ಅರಿಕೆಮಾಡಿಕೊಂಡಿತು.

ಕೊರಿಂಥದಲ್ಲಿರುವ ಕ್ರೈಸ್ತರು ಪಂಗಡಗಳ ಪಿಡುಗಿಗೆ ಒಳಗಾಗಿದ್ದರು ಯಾಕಂದರೆ ಅವರು ಸುವಾರ್ತೆಯ ಬೋಧನೆಯನ್ನು ಭಾಗಶಃವಾಗಿ ಮಾತ್ರ ಸ್ವೀಕರಿಸಿದ್ದರು. ಅವರ ಮದ್ಯದಲ್ಲಿ ಇರುವ ಶರೀರಾಧೀನ ಅಂಶಗಳಿಂದಾಗಿ ದೇವರ ಜ್ಞಾನವನ್ನು, ಶುದ್ದೀಕರಣವನ್ನು ಮತ್ತು ಕ್ರೂಜೆಯಲ್ಲಿ ವಿಮೋಚನೆಯನ್ನು ಗುರುತಿಸಲು ವಿಫಲವಾಗಿದ್ದವರು. ಪ್ರಾಪಂಚಿಕ ಜ್ಞಾನದಲ್ಲಿ ಮುಳುಗಿಹೋದವರಿಗೆ ಅಪೊಸ್ತಲನು ತನ್ನ ಬೋಧನೆಯ ಮೂಲಕ ಬೇಡಿಕೆಯನ್ನು ಸಲ್ಲಿಸಿದನು: ಅವನು ಅವರಿಗೆ ತಾನು ಅವರ ಮಧ್ಯದಲ್ಲಿ ಕ್ರಿಸ್ತನನ್ನು ಮಾದರಿಯಾಗಿಟ್ಟ ವಿಧಾನವನ್ನು ಪರೀಕ್ಷಿಸಿಕೊಳ್ಳಲು ಕರೆನೀಡಿದನು. ಅವನು ಅವರಿಗೆ ಸುವಾರ್ತೆಯನ್ನು ಬೋಧಿಸುವದು ಮಾತ್ರವಲ್ಲ, ತನ್ನನ್ನು ತಾನು ವಿಶ್ವಾಸಕ್ಕೆ ಯೋಗ್ಯನಾದ ಮನುಷ್ಯ ಎಂಬುದನ್ನು ತೋರಿಸಿದನು. ಪೌಲನು ಕ್ರೂಜೆಯ ಮೌಲ್ಯಗಳನ್ನು ಅಪ್ಪಿಕೊಳ್ಳಲು ಅವರ ಮುಂದೆ ಒಂದು ಉದಾಹರಣೆಯನ್ನು ಇರಿಸಿದನು. ಅವನ ಬೇಡಿಕೆಗಳನ್ನು ಅಮೂರ್ತವಾದ ತತ್ವಗಳೊಂದಿಗೆ ಮಂಡಿಸಲಿಲ್ಲ; ಅದನ್ನು ವಯಕ್ತಿಕ ಜೀವನದ ವಿಧಾನವಾಗಿ ಪ್ರದರ್ಶಿಸಿದನು. ಅವನ ಬಯಕೆ ವಾಗ್ವಾದವನ್ನು ಜಯಿಸುವದಾಗಿರಲಿಲ್ಲ

ಆದರೆ ಸಹೋದರರು ಏನಾಗಬೇಕೆಂದು ಅವನು ನಿರೀಕ್ಷಿಸಿದ್ದಾನೋ ಅದನ್ನು ಅವರು ತಿಳಿದುಕೊಳ್ಳಬೇಕೆಂದು ಇಚ್ಛಿಸಿದ್ದನು. ಬೋಧಿಸುವ ಸತ್ಯವನ್ನು ಸಮಂಜಸವಾಗಿಸಲು ತನ್ನನ್ನು ತಾನು ಸಶರೀರವಾಗಿ ಇಡಲು ಅಪೊಸ್ತಲನಿಗೆ ಯಾವುದೇ ಹಿಂಜರಿಕೆಯಿರಲಿಲ್ಲ. ಅವನು ತನ್ನ ಶೋತೃಗಳನ್ನು ತಮ್ಮ ಜೀವಿತವನ್ನು ಪರೀಕ್ಷಿಸಿಕೊಳ್ಳುವದಕ್ಕೆ ಕರೆನೀಡಿದನು.

## ಪೌಲನು ತನ್ನ ಸಂದೇಶವನ್ನು ಪ್ರತಿಪಾದಿಸಿದ್ದು (2:1-5)

**[1]ಸಹೋದರರೇ, ನಾನಂತೂ ದೇವರು ಹೇಳಿಕೊಟ್ಟ ಮಾತನ್ನು ತಿಳಿಸುವವನಾಗಿ ನಿಮ್ಮ ಬಳಿಗೆ ಬಂದಾಗ ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದದಿಂದಾಗಲಿ ಬರಲಿಲ್ಲ. [2]ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. [3]ಇದಲ್ಲದೇ ನಾನು ನಿಮ್ಮಲ್ಲಿಗೆ ಬಂದಾಗ ನಿಮ್ಮ ಬಳಿಯಲ್ಲಿ ಬಲಹೀನನೂ ಭಯಪಡುವವನೂ ಬಹು ನಡುಗುವವನೂ ಆಗಿದ್ದೇನು. [4-5]ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರಮಾಡಿಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಉಪಯೋಗಿಸಿದೆನು.**

**ವಚನ 1.** ಪೌಲನು ಕೊರಿಂಥಕ್ಕೆ ಬೇಟಿನೀಡಿ ಮೂರು ವರ್ಷಗಳ ಗತಿಸಿದವು. ಇಂದು ಮಿಶನರಿಗಳು ಸಾಕ್ಷೀಕರಿಸುವಂತೆ, ಸಿದ್ಧಾಂತಗಳಲ್ಲಿ ಮತ್ತು ನಡತೆಯಲ್ಲಿ ಸ್ಥಿರತೆಯನ್ನು ಹೊಸ ಸಭಿಕರಲ್ಲಿ ನಿರ್ವಹಿಸುವದು ಹಲವು ಸಾರಿ ಕಠಿಣವಾಗುತ್ತದೆ. ಪೌಲನು ತನ್ನ ದಿನಗಳ ಸನ್ನಿವೇಶದಲ್ಲಿ ಯಾವ ಬದಲಾವಣೆಯನ್ನು ಕಾಣಲಿಲ್ಲ. ಅವನ ಅನುಪಸ್ಥಿತಿಯಲ್ಲಿ, ಕೊರಿಂಥದಲ್ಲಿ ವಿಗ್ರಹಾರಾಧನೆಯ ಸಂಸ್ಕೃತಿಯು ಅವನು ಬೋಧಿಸಿರುವದನ್ನು ಅತಿಕ್ರಮಿಸಿತು. ಅಪೊಸ್ತಲನು ತನ್ನ ಸಂದೇಶ ಮತ್ತು ಸಂದೇಶವಾಹಕರು ತನ್ನ ಓದುಗರ ಮನಸ್ಸಿನ ಮೇಲೆ ಬಿಗಿಯಾಗಿ ಒಂದಕ್ಕೊಂದು ಹೆಣೆದುಕೊಂಡಿವೆ ಎಂಬುದನ್ನು ತಿಳಿದುಕೊಂಡಿದ್ದನು. ಆದುದರಿಂದ, ಆತನು ದೇವರ “ಹುಚ್ಚುತನ” ಮತ್ತು ಲೋಕದ “ಜ್ಞಾನ” ಇವುಗಳ ಮಧ್ಯದಲ್ಲಿರುವ ವ್ಯತ್ಯಾಸದಿಂದ (1:21-25) ತನಗೆ ವಯಕ್ತಿಕವಾಗಿ ಮತ್ತು ಕೊರಿಂಥದಲ್ಲಿರುವ ಕ್ರೈಸ್ತರಿಗೆ ತನ್ನ ಪ್ರಾರಂಭದ ಸೂಚನೆಗಳಿಂದ ಗಮನವನ್ನು ಬದಲಾಯಿಸಿದನು.

ಅವನ ಬೋಧನೆಯು ಕೊರಿಂಥದವರಿಗೆ ಯಾವುದೇ ಸುಳ್ಳು ನೆಪವಿಲ್ಲದೆ ಆ ಸತ್ಯಕ್ಕೆ ಸಾಕ್ಷಿಗಳಾಗಿರುವಂತೆ ಮಾಡಿತು. ಅವನು ಕೇಂದ್ರಸ್ಥಳಗಳಲ್ಲಿ ಕುತರ್ಕಿಗಳನ್ನು ವಿಗಂಡಿಸಲಿಲ್ಲ. ನಿಪುಣ ಹೇಳಿಕೆಗಳು ಅವನ ಶೈಲಿ ಅಥವಾ ಹೇಳಿದ ವಿಷಯಗಳ ಗುಣಲಕ್ಷಣಗಳನ್ನು ವಿವರಿಸಲಿಲ್ಲ. ಅಲಂಕಾರಿಕ ಮಂಡನೆಯ ಮೂಲಕ ಮನೋರಂಜನೆಯನ್ನು ಹುಡುಕುತ್ತಿರುವವರು ಅಥವಾ ರಹಸ್ಯಗಳಿಂದ ಗೊಂದಲಕ್ಕೆ ಒಳಗಾದವರು ಮತ್ತೊಂದು ಕಡೆಗೆ ತಿರುಗಿಕೊಳ್ಳವದು ಅವಶ್ಯವಾಗಿತ್ತು. ಅವನು ನೇರವಾದ ಮನುಷ್ಯನಾಗಿ ನೇರವಾದ ಪ್ರಕಟನೆಯೊಂದಿಗೆ ಬಂದನು.

ಪೌಲನ ಒಟ್ಟಾರೆ ಯೋಚನೆ ಸ್ಪಷ್ಟವಾಗಿತ್ತು, ಆದರೆ ವೇದಾಭ್ಯಾಸಕ್ಕೆ ಸಂಬಂಧಿಸಿದ ಎರಡು ಸಂಗತಿಗಳ ಸ್ಪಷ್ಟೀಕರಣ ಉದ್ದೇಶದ ಸೂಕ್ಷ್ಮವ್ಯತ್ಯಾಸವನ್ನು ತಿಳಿಯುವದಕ್ಕೆ ಸಹಾಯಕವಾಗಿದ್ದವು. ಮೊದಲನೆಯದು, **ಶ್ರೇಷ್ಠತೆಯೊಂದಿಗೆ** (καθ' ὑπεροχὴν, *kath' huperochēn*) ಅನುವಾದಿಸಲಾದ ಪದಗಳು ಅವರ **ಮಾತುಗಳನ್ನು** ಮಾತ್ರ ಬದಲಾವಣೆ (λόγου, *logou*) ಮಾಡುವಂತವುಗಳಾಗಿದ್ದವು ಅಥವಾ ಅವು "ಮಾತುಗಳು" ಮತ್ತು ಜ್ಞಾನವನ್ನು (σοφίας, *sophias*) ಬದಲಾವಣೆ ಮಾಡಿಕೊಳ್ಳಲು ತಿಳಿದುಕೊಳ್ಳುವಂತವುಗಳಾಗಿದ್ದವು. "ಶ್ರೇಷ್ಠತೆಯೊಂದಿಗೆ" ಎಂಬ ವಾಕ್ಯಂಗವು ಅವರಲ್ಲಿರುವ ಆಸಕ್ತಿಗಿಂತ ಯಾವ ಬದದಲಾವಣೆಯನ್ನು ತರುತ್ತದೆ. "ಮಾತುಗಳು" ಮತ್ತು "ಜ್ಞಾನ" ಪರಸ್ಪರ ಸಂಬಂಧವನ್ನು ಹೊಂದಿವೆ. ಆದರೆ ಸಂಪರ್ಕದ ವಿವಿಧ ಅಂಶಗಳಿಗೆ ಒತ್ತುನೀಡುವದರ ಮೂಲಕ. ಅದೇ ಸಮಯದಲ್ಲಿ "ಮಾತುಗಳು" ಒಬ್ಬ ವ್ಯಕ್ತಿ ಹೇಳಿದ ತಾತ್ಪರ್ಯ ಅಥವಾ ಅದನ್ನು ಹೇಳುವ ಶೈಲಿಯನ್ನು ಉಲ್ಲೇಖಿಸುತ್ತದೆ, "ಜ್ಞಾನ" ತನ್ನ ಸ್ವರೂಪದಿಂದಲೇ ತಾತ್ಪರ್ಯದ ಕುರಿತಾಗಿ ಉಲ್ಲೇಖಿಸುತ್ತದೆ. ಪೌಲನು ಕೊರಿಂಥಕ್ಕೆ ಅಲಂಕಾರಿಕ, ಬುದ್ಧಿವಂತ ತತ್ವಜ್ಞಾನಿಗಳ ಕಾಲ್ಪನಿಕ ಪದಗಳೊಂದಿಗೆ ಬರಲಿಲ್ಲ; ಅವನು ಅವರ ಮಂಡಿಸುವ ಶೈಲಿಯನ್ನು ಅನುಕರಿಸಲಿಲ್ಲ. ಈ ಕಾರಣದಿಂದಾಗಿ, "ಶ್ರೇಷ್ಠತೆ" ಯನ್ನು "ಮಾತುಗಳೊಂದಿಗೆ" ಮಾತ್ರ ಹೊಂದಿಸುವದು ಉತ್ತಮವಾಗಿದೆ. ಅಪೊಸ್ತಲನು ತಾನು ಜ್ಞಾನದೊಂದಿಗೆ ಬರಲಿಲ್ಲ ಎಂಬುದನ್ನು ಸಮರ್ಥಿಸಿಕೊಳ್ಳುತ್ತಾನೆ, ಕನಿಷ್ಠಪಕ್ಷ ಗ್ರೀಕ ಲೋಕವು ತಿಳಿದುಕೊಳ್ಳುವ ರೀತಿಯ ಜ್ಞಾನದಿಂದ ಬರಲಿಲ್ಲ ಎಂದು ಸಹ ಅಪೊಸ್ತಲನು ಸಮರ್ಥಿಸಿಕೊಳ್ಳುತ್ತಾನೆ. NIV ಶ್ರೆಷ್ಠತೆಯನ್ನು "ಪದಗಳು" ಮತ್ತು "ಜ್ಞಾನ" ದೊಂದಿಗೆ ಜೋಡಿಸುತ್ತದೆ: "ನಾನು ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಬರಲಿಲ್ಲ." ಎಂದು ಜೋಡಿಸುತ್ತದೆ. ಈ ಸಂಗತಿಯಲ್ಲಿ NASB ಉತ್ತಮವಾದ ಅನುವಾದವನ್ನು ಹೊಂದಿದೆ: "ನಾನು ಮಾತಿನ ಶ್ರೇಷ್ಠತೆಯೊಂದಿಗಾಗಲಿ ಅಥವಾ ಜ್ಞಾನದಿಂದಾಗಲಿ ಬರಲಿಲ್ಲ."

ವೇದಾಬ್ಯಾಸಕ್ಕೆ ಸಂಬಂಧಿಸಿದ ಎರಡನೆಯ ಪ್ರಶ್ನೆ ಮೂಲಪಾಠದ ವಿಭಿನ್ನತೆಯ ಕುರಿತಾಗಿದೆ. ಕೆಲವು ಪ್ರಾರಂಭದ ಹೆಚ್ಚು ಮಾನ್ಯತೆ ಪಡೆದ ಹಸ್ತಪ್ರತಿಗಳು "ದೇವರ ರಹಸ್ಯವನ್ನು" (μυστήριον τοῦ θεοῦ, *mustērion tou Theou*) ಒಳಗೊಂಡಿವೆ 2:1ರಲ್ಲಿ ವಾಕ್ಯದ ಕೊನೆಯಲ್ಲಿವೆ. ಇನ್ನೂ ಅನೇಕ ಹಸ್ತಪ್ರತಿಗಳು **ದೇವರ** (μαρτύριον τοῦ θεοῦ, *marturion tou Theou*) **ಕುರಿತಾದ ಸಾಕ್ಷಿಯನ್ನು** ಹೊಂದಿವೆ. NRSV ಒಪ್ಪಿಸಿಬಿಡುವ "ರಹಸ್ಯವನ್ನು" ನೀಡುತ್ತದೆ. ಆದರೆ ಅನೇಕ ಅನುವಾದಗಳು "ಸಾಕ್ಷಿಗಳಾಗಿವೆ." ತಕ್ಷಣದ ಸನ್ನಿವೇಶದಲ್ಲಿ ಎರಡೂ ಪದಗಳು ಕಾಣಿಸಿಕೊಳ್ಳುತ್ತವೆ ("ಸಾಕ್ಷಿ" 1:6ರಲ್ಲಿ; "ರಹಸ್ಯ" 2:7ರಲ್ಲಿ). ಅಯ್ಕೆ ಕಠಿಣವಾಗಿದೆ. 2:1ರಲ್ಲಿರುವ ಪೌಲನ ವಿಷಯ ಅವನು ಕೊರಿಂಥದವರಿಗೆ ಕ್ರಿಸ್ತನನ್ನು ಮಂಡಿಸಿದ ವಯಕ್ತಿಕವಾದ ವಿಧಾನದ ಕುರಿತು ಕಳಕಳಿಯನ್ನು ಹೊಂದಿದೆ. "ಸಾಕಿಯನ್ನು" ಓದುವದು ಉತ್ತಮವಾದ ಅನುವಾದ ಯಾಕಂದರೆ ಅಪೊಸ್ತಲು ಏನು ಮಾಡಿದ್ದಾನೆ ಎಂಬುದನ್ನು ಹೆಚ್ಚು ಸಮಂಜಸವಾಗಿ ಸೂಚಿಸುತ್ತದೆ.

**ವಚನ 2.** ಪೌಲನು ಬೋಧಿಸಿದ ಎಲವನ್ನೂ ಒಳಗೊಂಡಿದೆ ಮತ್ತು ಅವನ ಸಂದೇಶದ ಕೇಂದ್ರ ಸತ್ಯದ ಮೂಲಕ ಹರಿದು ಬಂದಿದೆ: **ಯೇಸು ಕ್ರಿಸ್ತನು, ಕ್ರೂಜಿತನಾದನು**. ತಾನು

ಅರಿತಿರುವ ಲೋಕದ-ಬುದ್ಧಿವಂತರು ತಿರಸ್ಕಾರಯೋಗ್ಯ ಸಂದೇಶವನ್ನು ಹುಡುಕುತ್ತಾರೆ ಎಂದು ಅರಿತಿರುವ ಅಪೊಸ್ತಲನು ಪ್ರಜ್ಞಾಪೂರ್ವಕವಾಗಿ ಅದಕ್ಕಾಗಿ ನಿಲ್ಲುವದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಅವನ ವಾಸ್ತವತೆಯಲ್ಲಿ ವಯಕ್ತಿಕ ಹಿಂಬಾಲಕರನ್ನು ಅಥವಾ ತನ್ನ ಸ್ವಂತ ಗೌರವವನ್ನು ವಿಸ್ತರಿಸಲು ಬಯಸುವದಿಲ್ಲ. ಕೊರಿಂಥದ ಮೂಲಕ ಹಾದುಹೋಗುವ ಸಂಚಾರಿ ಬೋಧಕರು ಉದ್ಯೋಗವನ್ನು ಅಳವಡಿಸಿಕೊಳ್ಳಲು ಕೆಳಗಿನವುಗಳನ್ನು ಹೊಂದಿಕೊಂಡಿದ್ದರು, ಆದರೆ ಅವನು ಸುವಾರ್ತೆಯೊಂದಿಗೆ ಸಂಧಾನ ಮಾಡಿಕೊಳ್ಳಲು ನಿರಾಕರಿಸಿದನು. ದೇವರು ತನಗೆ ನೀಡಿದ ಪ್ರಕಟನೆಗೆ ಅನುಸಾರವಾಗಿ ಮಾತನಾಡುವದನ್ನು ಆತನು ಆಯ್ದುಕೊಂಡನು. ಜನಪ್ರಿಯತೆಯಾಗಲಿ ಅಥವಾ ಹಣದ ಮೇಲಿನ ಆಸಕ್ತಿಯಾಗಲಿ ಅವನಿಗೆ ಮಾತನಾಡಲು ಒತ್ತಾಯಪಡಿಸಲಿಲ್ಲ. ಪೌಲನು ಕೊರಿಂಥದವರಿಗೆ ಅವನಿಗಾಗಿ ಸಾಕ್ಷಿಯನ್ನು ನೀಡುವದಕ್ಕೆ ಕರೆನೀಡಿದನು. ಅವನು ಕ್ರಿಸ್ತನು ಅವನಿಗೆ ಪ್ರಕಟಿಸಲು ನೀಡಿದ ಸಂದೇಶದ ವಿಶ್ವಾಸಾರ್ಹತೆಯೊಂದಿಗೆ ಆತನು ಯಾವುದೇ ರೀತಿಯ ಸಂಧಾನವನ್ನು ಮಾಡಿಕೊಳ್ಳಲಿಲ್ಲ, ಆ ಸಂದೇಶದ ಪರಿಣಾಮ ಅವರ ಶುದ್ಧೀಕರಣ.

ಅಪೊಸ್ತಲನ ಪದಗಳ ಉಪ-ವಿಷಯ ಅವನು ಕೊರಿಂಥದವರು ತನ್ನ ಉದಾಹರಣೆಯನ್ನು ಅನುಸರಿಸಬೇಕೆಂದು ಬಯಸಿದನು. ಅವರು ತಮ್ಮ ವಯಕ್ತಿಕ ಮಹಿಮೆಗಾಗಿ ಬೆನ್ನಟ್ಟಿದ ವಾಸ್ತವತೆಗಳನ್ನು ತೊರೆದುಬಿಟ್ಟರು. ಅವರು, ಅವನಂತೆ ಸತ್ಯವನ್ನೇ ಹೊರತು ಬೇರೆ ಯಾವುದೇ ಕಾರಣಕ್ಕಾಗಿ ಸತ್ಯವನಲ್ಲದೇ ಯಾವುದನ್ನು ಮಾತನಾಡದಿರುವ ವಿಶ್ವಾಸಾರ್ಹ ಜನರಾಗಿದ್ದರು. ಕ್ರಿಸ್ತನನ್ನು ಅಪ್ಪಿಕೊಳ್ಳುವದು ಎಂದರೆ ಲೋಕವು ನೀಡುವ ಶಕ್ತಿ ಮತ್ತು ಜ್ಞಾನದ ವಿಗ್ರಹಗಳನ್ನು ತಿರಸ್ಕರಿಸುವದು ಅವಶ್ಯ ಎಂಬುದನ್ನು ಕಲಿತಿದ್ದರು. ಯೇಸು ಕ್ರಿಸ್ತನು ನಮಗಾಗಿ ಕ್ರೂಜಿತನಾಗಿದ್ದು ನಮ್ಮ ಮಹಿಮೆಗಾಗಿ. ನಮಗಾಗಿ ಲೋಕದ-ಬುದ್ಧಿವಂತರನ್ನು ನಾಚಿಕೆಪಡಿಸುವದಕ್ಕಾಗಿ ನಾವುದೇವರ ಜ್ಞಾನಕ್ಕೆ ಬೆನ್ನು ಹಾಕುವಂತೆ ಅನುಮತಿಸುತ್ತಾನೆ. ಸಭೆಯು ಕ್ರಿಸ್ತನ ಕ್ರೂಜೆಯ ಸುತ್ತ ಐಕ್ಯತೆಯಲ್ಲಿ ಬರುವಾಗ, ಹುಚ್ಚುತನವಾದ ಪಕ್ಷಗಳ ಕ್ಷುಲಕತನ ಅವರಿಗೆ ತೊಂದರೆ ನೀಡುವದನ್ನು ನಿಲ್ಲಿಸುತ್ತವೆ.

**ವಚನ 3.** ಪೌಲನು ಜ್ಞಾನ ಮತ್ತು ಬುದ್ಧಿಹೀನತೆಯ ಕುರಿತು ಹೇಳಿರುವದೆಲ್ಲವೂ ಸಭೆಯಲ್ಲಿ ಅಸ್ತಿತ್ವದಲ್ಲಿರುವ ಪಂಗಡಗಳಿಗೆ ಪ್ರತಿಕ್ರಿಯೆಯಾಗಿ. ಅಪೊಸ್ತಲನು ಜ್ಞಾನದ ಕುರಿತಾಗಿ ಅಮೂರ್ತವಾದ ಅಭಿಪ್ರಾಯಗಳನ್ನು ನೀಡುವದಿಲ್ಲ. ಹಿಂಜರಿಕೆಯಿಲ್ಲದೇ, ಪೌಲನು ಕೊರಿಂಥದವರು ಉದ್ಯೋಗದಲ್ಲಿರುವ ತತ್ವಜ್ಞಾನಿಗಳು ಮತ್ತು ಭಾಷಾ ನಿಪುಣರು ಅಪೇಕ್ಷಿಸುತ್ತಿದ್ದ ಮೃದುವಾದ ಶ್ರೇಷ್ಠತೆಯ ವಿರೋಧವಾಗಿ ತಾನೇ ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ. ಅವರಂತೆ, ಆತನು ತಾನು ಭಯಪಡುವವನು ಮತ್ತು ಬಲಹೀನಾಗಿರುವದನ್ನು ತೋರಿಸಲು ಸಿದ್ಧನಾಗಿದ್ದಾನೆ. ಕೊರಿಂಥದವರು ಅವನು ಅವರ **ಬಲಹೀನತೆಯಲ್ಲಿ ಮತ್ತು ಭಯದಲ್ಲಿ ಮತ್ತು ಹೆಚ್ಚಾಗಿ ನಡಗುತ್ತಾ** ಅವರೊಂದಿಗೆ ಇದದ್ದನ್ನು ನೆನಪುಮಾಡಿಕೊಳ್ಳುತ್ತಾರೆ. ಗಲಾತ್ಯದಲ್ಲಿರುವ ಕ್ರೈಸ್ತರಿಗೆ ಆತನು ಬರೆಯುತ್ತಾನೆ. ". . . ನನ್ನ ಶರೀರಕ್ಕೆ ಅಸೌಖ್ಯವಿದ್ದದರಿಂದ ನಾನು ನಿಮ್ಮಲ್ಲಿದ್ದು ಮೊದಲನೆಯ ಸರ್ತಿ ನಿಮಗೆ ಸುವಾರ್ತೆ ಸಾರಿದ್ದನ್ನು ನೀವು ಬಲ್ಲಿರಿ. ನನ್ನ ಶರೀರದಲ್ಲಿ ನಿಮ್ಮ ಬೇಸರಿಕೆಗೆ ಅಸ್ಪದವಾದದ್ದನ್ನು ನೀವು ಹೀನೈಸಲಿಲ್ಲ ಓಕರಿಸಲಿಲ್ಲ . . ." (ಗಲಾತ್ಯ 4:13, 14).

ಸುವಾರ್ತೆಯನ್ನು ಅವರಿಗೆ ಬೋಧಿಸಿದ ಈ ಮನುಷ್ಯನು. “ದೈಹೀಕವಾಗಿ ಬಲಿಷ್ಟನಾಗಿರಲಿಲ್ಲ, ಮೃದು ಮಾತನಾಡುವ ಭಾಷಣಕಾರನಾಗಿರಲಿಲ್ಲ, ಪ್ರಶಂಸೆಗೆ ಪಾತ್ರನಾದ ಬೋಧಕನಾಗಿರಲಿಲ್ಲ, ಮತ್ತು ಪರಿಣಿತ ವ್ಯಾಪಾರಿಯಾಗಿರಲಿಲ್ಲ.” ಕ್ರೂಜೆಯ (ಸುವಾರ್ತೆಯ) ಸ್ವರೂಪವನ್ನು ಸೊಗಸಾಗಿ ಮತ್ತು ಬುದ್ಧಿವಂತಿಕೆಯಿಂದ ಬೋಧಿಸಲು ಸಾಧ್ಯವಿರಲಿಲ್ಲ, ಕೇವಲ ಬಹೀನತೆಯಲ್ಲಿ ಮಾತ್ರ.[1]

ತನ್ನ ಮಾತುಗಳಿಗೆ ಒತ್ತನ್ನು ನೀಡಲು, ತನ್ನ ಶ್ರೋತೃಗಳಿಗೆ ಕೊರಿಂಥಕ್ಕೆ ತನ್ನ ಮೊದಲನೆಯ ಆಗಮನವನ್ನು ಜ್ಞಾಪಿಸುತ್ತಾನೆ (ಅಪೊಸ್ತಲರ ಕೃತ್ಯದ 18ನೇ ಅಧ್ಯಾಯದಲ್ಲಿ ಕ್ರೂಢಿಕರಿಸಿದ ಸಂಗತಿಗಳನ್ನು). ಅವನು ಕೊರಿಂಥಕ್ಕೆ ಆಗತಾನೆ ಸಂಚರಿಸಿದ್ದ ಕಾರ್ಯ ಆಥೇನೆಯಲ್ಲಿ ಫಲವಿಲ್ಲದಂತೆ ತೋರಿಬಂತು. ತಿಮೋಥಿ ಮತ್ತು ಶೀಲರು ಮೆಕೆದೋನ್ಯದಲ್ಲಿ ಸಭೆಗಳನ್ನು ಕಟ್ಟುತ್ತಿದ್ದರು. ಪೌಲನು ಕೊರಿಂಥಕ್ಕೆ ಒಬ್ಬನೇ ಆಗಮಿಸಿದನು. ಇದರಿಂದಾಗಿ ಅವರು ಈ ಮನುಷ್ಯನು ತನ್ನೊಂದಿಗೆ ಯಾವುದೇ ಅರ್ಹತೆಯಿಲ್ಲದ ಬುದ್ದಿವಂತ ಮತ್ತು ವಾಕ್ಚಾತುರ್ಯವಿಲ್ಲದ ಜನರನ್ನು ತನ್ನೊಂದಿಗೆ ಕರೆತಂದನು ಎಂಬುದಕ್ಕೆ ಸಾಕ್ಷಿ ಹೇಳಲು ಅವನು ಪ್ರಾರಂಭದ ದಿನಗಳಲ್ಲಿದ್ದ ಕ್ರೈಸ್ತರನ್ನು ಅಲ್ಲಿಯೇ ಉಳಿಸಿಕೊಂಡನು. ಪೌಲನು ಪರಿಗಣಿಸಿದಂತೆ ಕ್ರಿಸ್ತನಲ್ಲಿರುವದು ಮತ್ತು ಆತನನ್ನು ಪ್ರಸಿದ್ದಿಪಡಿಸುವದು ಲೋಕವು ವ್ಯಾಖ್ಯಾನಿಸುವ ಗೌರವ ಮತ್ತು ಬಲವನ್ನು ತಿರಸ್ಕರಿಸುವದಾಗಿತ್ತು.

**ವಚನ 4.** ಅವನು ಕೊರಿಂಥದವರಿಗೆ ತನ್ನ **ಸಂದೇಶ ಮತ್ತು ತನ್ನ ಪ್ರಸಂಗವನ್ನು** ಜ್ಞಾಪಿಸುವಾಗ ಅಪೊಸ್ತಲನು ಇಬ್ಬರ ನಡುವೆ ತೀವ್ರವಾದ ವ್ಯತ್ಯಾಸವನ್ನು ತೋರಿಸುವ ಉದ್ದೇಶವನ್ನು ಹೊಂದಿದ್ದನು. ಪೌಲನು, ಇತರ ಭಾಷಣಕಾರರು ಮತ್ತು ಲೇಖಕರಂತೆ, ತನ್ನ ಮಾತುಗಳನ್ನು ಸಾಹಿತ್ಯದ ತಂತ್ರಗಳಾದ “ಶಬ್ದಬಾಹುಳ್ಯದಿಂದ” ಅವಶ್ಯಕತೆಗಿಂತ ಹೆಚ್ಚಾದ ಉದ್ದೇಶದೊಂದಿಗೆ. ಒತ್ತುನೀಡುವದಕ್ಕೆ ಉಪಯೋಗಿಸುವದು. ಎರಡು ಪದಗಳು “ಸಂದೇಶ” ಮತ್ತು “ಪ್ರಸಂಗಿಸುವದು” ಒಟ್ಟಾಗಿ ತೆಗೆದುಕೊಂಡು, ವ್ಯಕ್ತಪಡಿಸುವದರ ಪರಿಪೂರ್ಣತೆಯನ್ನು ಒದಗಿಸುತ್ತಾ ತಾನು ಬಯಸಿದ್ದನ್ನು ಪೌಲನು ತಿಳಿಸಿದನು. ಅವನ **ಬೋಧನೆಯು ಮನದಟ್ಟು ಮಾಡುವ ಜ್ಞಾನದ ಪದಗಳಿಂದ ಕೂಡಿರಲಿಲ್ಲ**, ಇಲ್ಲವೇ ಅವನು ಕೊರಿಂಥದವರು ತಮ್ಮ ಪಟ್ಟಣದಿಂದ ಹಾದುಹೋಗುತ್ತಿದ್ದ ಕುತರ್ಕಿಗಳಿಂದ ಆಲಿಸುವದಕ್ಕೆ ರೂಢಿಮಾಡಿಕೊಂಡಿರುವ ವಾಕ್ಚಾತುರ್ಯದ ಸುರಿಮಳೆಯಿಂದ ಮಂಡಿಸಲಿಲ್ಲ. ಬದಲಾಗಿ, ಅವನ ಪ್ರಸಂಗವು **ಆತ್ಮ ಮತ್ತು ಆತ್ಮನ ಬಲದ ಪ್ರದರ್ಶನಗಳನ್ನು** ಜೋತೆಗೂಂಡಿತ್ತು, ಅದನ್ನೇ ಅವನು ಸೂಚಿಸಿದ್ದನು.

ಅವನು ಆದ್ಭುತಗಳನ್ನು ಮಾಡುವದನ್ನು ಅವನ ಓದುಗರು ನೋಡಿದ್ದರು ಎಂಬುದರಲ್ಲಿ ಸಂಶಯವಿರಲಿಲ್ಲ. ಅ.ಕೃ. 18 ಪೌಲನು ಕೊರಿಂಥದಲ್ಲಿ ಮಾಡಿದ ಯಾವುದೇ ರಹಸ್ಯಗಳನ್ನು ಒಳಗೊಂಡಿರಲಿಲ್ಲ, ಆದರೆ ಆತನು ಮುಂದೆ ಪಟ್ಟಣದಲ್ಲಿರುವ ಸಭೆಗೆ ಬರೆಯುತ್ತಾನೆ, “ನಾನು ಹಿಂಸೆಯನ್ನು ಸ್ಥಿರಚಿತ್ತದಿಂದ ತಾಳಿಕೊಳ್ಳುವದರಲ್ಲಿಯೂ ಸೂಚಕಕಾರ್ಯಗಳನ್ನೂ ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದ್ದರಲ್ಲಿಯೂ ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು” (2 ಕೊರಿಂಥ 12:12; ಗಲಾತ್ಯ 3:5). ಆತ್ಮನ ಸಾಕ್ಷಿ, ಅಲಂಕಾರಿಕ ಸಾಹಿತ್ಯದ ಸೂತ್ರಗಳಲ್ಲಿ, ಕೊರಿಂಥದಲ್ಲಿ ಪೌಲನ ಬೋಧನೆಯ ಸತ್ಯವನ್ನು ದೃಢಪಡಿಸಿದವು.

ಅಪೊಸ್ತಲನು ತಾನು ಪ್ರಕಟಿಸಿದ ಸಂದೇಶದಿಂದ ಪ್ರತ್ಯೇಕವಾಗಿ ನಿಲ್ಲಲಿಲ್ಲ. ಅವನು ತಾನೇ, ತನ್ನ ನಡತೆ, ತನ್ನ ಗೌರವ, ದೇವರೊಂದಿಗೆ ತನ್ನ ಸಂಬಂಧ, ಕ್ರಿಸ್ತನಲ್ಲಿ ತನ್ನ ನಿರೀಕ್ಷೆ ಇವೆಲ್ಲವೂ ಅವನು ಕೊರಿಂಥದಲ್ಲಿ ಸಾರಿದ ಸಂದೇಶದ ಭಾಗವಾಗಿದ್ದವು. ಪೌಲನು ಕೇವಲ ತನ್ನನ್ನು ತಾನು ಕ್ರಿಸ್ತನ ದೇಹದ ಐಕ್ಯತೆಗಾಗಿ ಕಾಪಾಡಿಕೊಂಡನು. ಅವನ ಕಳಕಳಿಯು ಪಕ್ಷದ ಉತ್ಸಾಹದ ಕುರಿತಾಗಿತ್ತು ಅದರ ಪರಿಣಾಮವಾಗಿ ಕೊರಿಂಥದ ಸಭೆಯಲ್ಲಿ ಪಂಗಡಗಳಾಗಿದ್ದವು. ಪಂಗಡಗಳ ಕಾರಣದ ಈ ಒಂದು ಅನ್ವೇಷಣೆಯಲ್ಲಿ, ಅವನು ತನ್ನ ಓದುಗರಿಗೆ ಕ್ರೂಜೆಯ ಕುರಿತಾದ ಜ್ಞಾನ ಮತ್ತು ಬುದ್ಧಿಹೀನತೆಯನ್ನು ಗಣನೆಗೆ ತೆರೆದುಕೊಳ್ಳಲು ಬೇಡಿಕೊಳ್ಳುತ್ತಾನೆ. ಅಪೊಸ್ತಲನು "ನಿಜವಾದ ಜ್ಞಾನ" ದ ಅರ್ಥವನ್ನು ಪರಿಗಣಿಸುವ ಅಭಿಪ್ರಾಯದ ಕುರಿತು ಯಾವುದೇ ಪದಗಳನ್ನು ನಿರರ್ಥಕಗೊಳಿಸಿಲ್ಲ. ಸಭೆಯ ಸಮಾಧಾನವು ವಿಶ್ವಾಸಿಗಳ ಮಧ್ಯದಲ್ಲಿ ಐಕ್ಯತೆ ಮತ್ತು ಒಳ್ಳೇತನದೊಂದಿಗೆ ಸಂಬಂಧಹೊಂದಿತ್ತು.

**ವಚನ 5.** ಅಪೊಸ್ತಲನು ತನ್ನ ಪ್ರಸಂಗದ ವಿಚಾರವನ್ನು ಮತ್ತು ಕೊರಿಂಥದವರ **ನಂಬಿಕೆಯ** ಉದಾಹರಣೆಯನ್ನು ಬದಲಾಯಿಸಿದ್ದಾನೆ. ಆತನು ಅವರಿಗೆ ಬೋಧಿಸಿದ್ದಾನೆ ಮತ್ತು ಅದರಂತೆ ತಾನು ವರ್ತಿಸಿ ನಂಬಿಕೆಯು ರಕ್ಷಣೆಯ ಪರಿಣಾಮದತ್ತ ನಡೆಸುತ್ತದೆ ಎಂದು ತಿಳಿಸಿದ್ದಾನೆ. ಅಪೊಸ್ತಲನ ನಂಬಿಕೆಯು **ಮನುಷ್ಯನ ಜ್ಞಾನವನ್ನು ಆಧರಿಸಿಲ್ಲ, ಆದರೆ ದೇವರ ಬಲದ ಮೇಲೆ ಆದರಿಸಿದೆ** ಕೊರಿಂಥದ ವಿಶ್ವಾಸಿಗಳ ನಂಬಿಕೆಯ ಮೇಲ ಸಹ ಅಲ್ಲ. ಪವಿತ್ರಾತ್ಮನು ಪೌಲನ ಜ್ಞಾನದ ಮೂಲನಾಗಿದ್ದಾನೆ (2:10), ಮತ್ತು ಆತ್ಮನು ಕೊರಿಂಥದವರಿಗೆ ತನ್ನ ಸ್ವಂತ ಪದಗಳಿಂದ ಜ್ಞಾನವನ್ನು ಒದಗಿಸುತ್ತಾನೆ. ಒಟ್ಟಾಗಿ ಅವರು ಕ್ರೂಜೆಯ ವಿಮೋಚನಾ ಕಾರ್ಯದಲ್ಲಿ ಹಂಚಿಕೊಳ್ಳುತ್ತಾರೆ. ಪೌಲನು ಜ್ಞಾನಕ್ಕೆ ಮಾನವನ ಆಡಂಬರವನ್ನು ತಿರಸ್ಕರಿಸುತ್ತಾನೆ ಮತ್ತು ಅವನು ಅವರೂ ಸಹ ಹಾಗೇ ಮಾಡಬೇಕೆಂದು ಇಚ್ಛಿಸುತ್ತಾನೆ. ಒಂದುವೇಳೆ ಅವರು ಹಾಗೆ ಮಾಡಿದ್ದಲ್ಲಿ, ಪಕ್ಷ ಮತ್ತು ಪಂಗಡಗಳ ನಿಷ್ಠೆಯು ನಿರ್ನಾಮವಾಗುತ್ತದೆ.

ಅದೇ ಸಮಯದಲ್ಲಿ, ಅಪೊಸ್ತಲನು ತನ್ನ ವಯಕ್ತಿಕ ಭಾರದ ಕುರಿತು ಜಾಗ್ರತಿಯನ್ನು ಹೊಂದಿದ್ದಾನೆ. ಕೊರಿಂಥದಲ್ಲಿರುವ ಸಭೆಗೆ, ಸುವಾರ್ತೆಯ ಸತ್ಯ ಮತ್ತು ಬಲ ಸಂದೇಶವಾಹಕನ ಗುಣಲಕ್ಷಣಕ್ಕೆ ಗಣನೀಯವಾದ ಮಟ್ಟದಲ್ಲಿ ಹೊಂದಿಕೊಂಡಿದೆ. ಸುವಾರ್ತೆಯ ಬೋಧಕರು, ಅವಶ್ಯಕೆಯಿಂದಾಗಿ, ತಾನು ಏನನ್ನು ಬೋಧಿಸುತ್ತಾನೆ ಅದಕ್ಕೆ ತನ್ನ ಸ್ವಂತ ಸಮರ್ಪಣೆಯಿಂದ ಅಳೆಯಲ್ಪಡುತ್ತಾನೆ ವಿಷಯ ಆಧುನಿಕವಾಗಿರಬಹುದು ಅಥವಾ ಪ್ರಾಚೀನವಾದದ್ದಾಗಿರಬಹುದು, ಕ್ರಿಸ್ತನ ಸುವಾರ್ತೆಯನ್ನು ಪ್ರಸಿದ್ಧಿಪಡಿಸುವವರೆಲ್ಲರೂ ಭಾರವಾದ ಜವಾಬ್ದಾರಿಯನ್ನು ಹೊಂದಿದ್ದಾರೆ.

## ದೇವರ ಜ್ಞಾನ, ಮರೆಯಾಗದೆ ಮತ್ತು ಪ್ರಕಟವಾಗಿದೆ (2:6-13)

ಕೊರಿಂಥದಲ್ಲಿ ಪಂಗಡಗಳು ಉದ್ಭವವಾಗಿವೆ ಯಾಕಂದರೆ ಜ್ಞಾನವನ್ನು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆ. ಕೊನೆಯಲ್ಲಿ, ಪೌಲನು ಜ್ಞಾನವನ್ನು ನಿರಾಕರಿಸಲಿಲ್ಲ. "ದೇವರ ಜ್ಞಾನ" (1:21) ಸುವಾರ್ತೆಯನ್ನು ಮಿತಿಗೊಳಿಸುತ್ತದೆ. "ಕ್ರೂಜಿತನಾದ ಕ್ರಿಸ್ತನು" "ದೇವರ ಜ್ಞಾನವಾಗಿದ್ದಾನೆ" (1:23, 24). ಕೊರಿಂಥದವರಿಗೆ ಪಾಪದಿಂದ ವಿಮೋಚನೆಯು "ದೇವರ

ಜ್ಞಾನಕ್ಕೆ" ಸಾಕ್ಷಿಯಾಗಿದೆ (1:30), ಅದರೆ "ಇಹಲೋಕದ ಅಧಿಪತಿಗಳು" (2:6) ಹಗುರವಾದ ಅನುಕರಣೆಯನ್ನು ಸಂಶೋಧಿಸಿದ್ದಾರೆ. ಪೌಲನು ಈ ಆಡಂಬರವನ್ನು ತಿರಸ್ಕರಿಸಿದ್ದಾನೆ. ಅಪೊಸ್ತಲನು "ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು" (2:2) ಹೊರತುಪಡಿಸಿ ಅವರ ಮಧ್ಯದಲ್ಲಿ ಏನನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿ, ದೇವರ ಜ್ಞಾನವನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಪೌಲನು ತನ್ನ ಐಕ್ಯತೆಗಾಗಿ ಕೊರಿಂಥದವರಿಗೆ ನೀಡಿದ ಎಚ್ಚರಿಕೆಯ ಅವಧಿಯಲ್ಲಿ ತಾನು ಅಪ್ಪಿಕೊಂಡಿರುವ ಜ್ಞಾನದ ಕುರಿತು ಮತ್ತು ಅವರು ಅಪ್ಪಿಕೊಳ್ಳಬೇಕೆಂದು ಬಯಸುವ ಜ್ಞಾನದ ಕುರಿತು - ಅವರಿಗೆ ಸಮಸ್ಯೆಯನ್ನು ನೀಡಿತ್ತಿರುವ ಸಣ್ಣ ಪಂಗಡಗಳನ್ನು ಮೃದುಗೊಳಿಸಲು ಹೆಚ್ಚು ಸಂಕ್ಷಿಪ್ತವಾದ ವಿವರಣೆಯನ್ನು ನೀಡುತ್ತಿದ್ದಾನೆ.

## ಜ್ಞಾನದ ಕುರಿತಾದ ತೀವ್ರ ವ್ಯತ್ಯಾಸ (2:6-9)

**[6]ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ, ಇಲ್ಲದೆ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. [7]ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೇ. [8]ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ; [9]ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.**

**ವಚನ 6.** ಅಪೊಸ್ತಲನು ಕೊರಿಂಥದಲ್ಲಿ ಕೆಲವರು ಜ್ಞಾನವನ್ನು ಗ್ರಹಿಸಿಕೊಂಡಿರುವ ಮತ್ತು ದೇವರು ತಾನೇ ಜ್ಞಾನವನ್ನು ವ್ಯಾಖ್ಯಾನಿಸಿರುವ ಹಾಗೆ ವ್ಯತ್ಯಾಸವನ್ನು ತೋರಿಸಿ ವಿಷಯಾಂತರಗೊಳಿಸುತ್ತಾನೆ. ಆದರೆ **ಇಹಲೋಕಾಧಿಪತಿಗಳು** ಗುರುತಿಸದ ವಿಧದ ಹಾಗೆ ಪೌಲನ ಬೋಧನೆಯಿಲ್ಲ, ಅದು ಉನ್ನತ ಮಟ್ಟದ್ದಾಗಿದೆ. **ಪ್ರಭುದ್ದರಾದವರು** ಈಗಾಗಲೇ ಸುವಾರ್ತೆಯಲ್ಲಿ ಅಡಗಿರುವ ಜ್ಞಾನವನ್ನು ಗುರುತಿಸಿದ್ದಾರೆ. ಅಪೊಸ್ತಲನು ಕೊರಿಂಥದ ವಿಶ್ವಾಸಿಗಳು ಪ್ರಭುದ್ದರಾಗಬೇಕೆಂದು ಬರೆಯುತ್ತಿದ್ದಾನೆ. ಜ್ಞಾನ ಮತ್ತು ಪ್ರಭುದ್ದತೆ ತಮ್ಮ ಹೋರಾಟವನ್ನು ಹಿಂದಕ್ಕೆ ಹಿಂದಕ್ಕೆ ಬಿಡುವ ಪರಿಣಾಮದತ್ತ ನಡೆಸುತ್ತದೆ. ವಿವೇಕವಿರುವ ವಯಸ್ಕರಿಗಿಂತ ಹೆಚ್ಚು ಎಳೆಗೂಸುಗಳೂ ಆಗಿರುವಂಥವರ ನಡೆತೆ (3:1) ರಾಜ್ಯದ ಸಂಗತಿಗಳ ಪರಿಣಾಮದಿಂದ ಒಬ್ಬ ಕ್ರೈಸ್ತನು ಪೌಲನವನೆಂದು ಇನ್ನೊಬ್ಬನು ಅಪೊಲ್ಲೋಸನವನೆಂದು ಹೇಳಿಕೊಳ್ಳುತ್ತಿದ್ದಾರೆ.

ಪೌಲನು ಎರಡು ವಿಧದ ಜ್ಞಾನವನ್ನು ಕೊರಿಂಥದವರ ಎದುರಿನಲ್ಲಿ ಇಡುತ್ತಿದ್ದಾನೆ. ಮೊದಲನೆಯದು ದೇವರಿಂದ ಬಂದ ಜ್ಞಾನ; ಇನ್ನೊಂದು **ಈ ಕಾಲದ** "ಇಹಲೋಕಾಧಿಪತಿಗಳು" ಅಪ್ಪಿಕೊಂಡಿರುವ ಜ್ಞಾನ. ವಿಮರ್ಶಕರು ಪೌಲನು "ಈ ಕಾಲದ ಇಹಲೋಕಾಧಿಪತಿಗಳು" ಎಂಬುದನ್ನು ಹೇಗೆ ಅರ್ಥೈಸಿದ್ದಾನೆ ಎಂಬುದರ ಕುರಿತು ಗಲಿಬಿಲಿಗೆ ಒಳಗಾಗಿದ್ದಾರೆ. ಕೆಲವರು ಜಗತ್ತಿನಲ್ಲಿ ಕಾರ್ಯ ನಿರತವಾಗಿರುವ ಮಾನವನ ಕಣ್ಣಿಗೆ ಕಾಣದಿರುವ ಪೈಶಾಚಿಕ ಶಕ್ತಿ ಎಂದು ಭಾವಿಸುತ್ತಾರೆ ಕೊಲಸ್ಸೆ 1:16 ರರಲ್ಲಿ

ಅಪೊಸ್ತಲನು “ದೃಶ್ಯ ಮತ್ತು ಅದೃಶ್ಯವಾದ” ಸಂಗತಿಗಳು ದೇವರಿಂದ ಸೃಷ್ಟಿಸಲ್ಪಟ್ಟಿವೆ ಎಂದು ಹೇಳುತ್ತಾನೆ. ಅವುಗಳು “ಸಿಂಹಾಸನ,” “ಪ್ರಭುತ್ವ,” “ಅಧಿಕಾರ” ಮತ್ತು “ಅಧಿಕಾರಿಗಳು” (ರೋಮಾ 8:38; ಕೊಲಸ್ಸೆ 2:15; ESV ನೋಡಿರಿ). ಕೊರಿಂಥದವರಿಗೆ, ಪೌಲನು, “ಜ್ಞಾನ” ಕೊರಿಂಥದಲ್ಲಿ ಪಂಗಡಗಳ ಪರಿಣಾಮವನ್ನು ತರಲು “ಈ ಪ್ರಪಂಚದ ದೇವರು” ಪ್ರೇರೆಪಿಸಿದ್ದಾನೆ ಎಂದು ಹೇಳುತ್ತಾನೆ (2 ಕೊರಿಂಥ 4:4). ಈ ವಿವರಣೆಯಲ್ಲಿರುವ ಸಮಸ್ಯೆ ಎನಂದರೆ ಸನ್ನಿವೇಶಕ್ಕೆ ಒಟ್ಟಾರೆ ಅಪರಿಚಿತವಿರುವ ವಿಷಯನ್ನು ಪರಿಚಯಿಸುವ ಅವಶ್ಯಕತೆಯನ್ನು ಹೊಂದಿದೆ. “ಇಹಲೋಕಾಧಿಪತಿಗಳು” ಕರ್ತನನ್ನು ಕ್ರೂಜೆಗೆ ಹಾಕಿದವರು ಎಂಬುದನ್ನು ವಚನ 8ರಲ್ಲಿ ಪುನಃ ಉಲ್ಲೇಖಿಸಲಾಗಿದೆ. Richard E. Oster, Jr., ಪೌಲನು ದೇವರ ಜ್ಞಾನವನ್ನು “ಕುರುಡು ಮತ್ತು ಮನ್ನಿಸಲಾರದ ರಾಜ್ಯದ ಅಧಿಕಾರಿಗಳ ಅಜ್ಞಾನವನ್ನು, ಇಹಲೋಕಾಧಿಪತಿಗಳ ಜ್ಞಾನದೊಂದಿಗೆ” ವ್ಯತ್ಯಾಸವನ್ನು ತೋರಿಸುತ್ತಾನೆಂದು ಅವನು ವೀಕ್ಷಿಸಿರುವದು ಸರಿಯಾಗಿದೆ.[2]

ಅವನ ಎಲ್ಲಾ ಪತ್ರಗಳಲ್ಲಿದ್ದಂತೆ, ಪೌಲನು ಅಪೇಕ್ಷೆಯನ್ನು ಉಸಿರಿದ್ದಾನೆ. ಲೋಕಾಂತ್ಯವು ಬರುತ್ತಿದೆ. ಕರ್ತನು ಬರುತ್ತಿದ್ದಾನೆ. “ಇಹಲೋಕಾಧಿಪತಿಯು” ಆ ಕ್ಷಣದಲ್ಲಿ ತಮ್ಮ ಬಲವನ್ನು ಉಪಯೋಗಿಸುತ್ತಾರೆ, ಆದರೆ **ಅವರು ಹೊರಟುಹೋಗುತ್ತಾರೆ**. ಅವನು ತನ್ನ ಶೋತ್ರುಗಳಿಗೆ ಕರ್ತನು ತಿರುಗಿ ಬರುವಾಗ ಪ್ರಸ್ತುತ ಕಾಲವು, ತನ್ನ ಬಲ ಮತ್ತು ಅಧಿಕಾರಿಗಳಿಂದ ಗತಿಸಿಹೋಗುತ್ತದೆ ಎಂದು ಹೇಳುತ್ತಿಲ್ಲ. ಅದು ಸತ್ಯವಾಗಿರಬಹುದು, ಆದರೆ ಪೌಲನು ಕೊರಿಂಥದವರಿಗೆ ಇನ್ನೂ ಹೆಚ್ಚಾಗಿ ತಕ್ಷಣದಲ್ಲಿರುವ ಭರವಸೆಯನ್ನು ನೀಡುತ್ತಾನೆ. ಕರ್ತನ ಬರೋಣವು ಬೇಗನೆ ಬರಬಹುದು ಅಥವಾ ಅದು ತಡವಾಗಬಹುದು; ಎರಡೂ ವಿಷಯಗಳಲ್ಲಿ ಈ ಕಾಲವು “ಗತಿಸಿಹೋಗುತ್ತದೆ.” ಪೌಲನ ಕಾಲದಲ್ಲಿ ಈ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ. ಅಂತ್ಯವು ಇನ್ನೂ ಬಂದಿಲ್ಲ, ಆದರೆ ಲೋಕದ ಅಧಿಕಾರಿಗಳ ಸೋಲಿನ ಸೂಚನೆಗಳು ಈಗಾಗಲೇ ಕಣ್ಣಿದ್ದವರಿಗೆ ನೋಡಲು ಸ್ಪಷ್ಟವಾಗಿ ಗೋಚರವಾಗಿವೆ. “ಸುತ್ತಲೂ ನೋಡಿರಿ” ಪೌಲನು ಬೇಡಿಕೊಳ್ಳುತ್ತಾನೆ, “ಜ್ಞಾನಿಗಳು ಈ ಲೋಕಕ್ಕೆ ಈಗಾಗಲೆ ಅತ್ಯಂತ ಬರುವದನ್ನು ನೋಡುತ್ತಿದ್ದಾರೆ” ಯೋಹಾನನು “ಗತಿಸಿಹೋಗುತ್ತಿದೆ” ಎಂಬ ಪದಕ್ಕೆ ಬೇರೆ ಗ್ರೀಕ್ ಪದವನ್ನು ಉಪಯೋಗಿಸುತ್ತಾನೆ ಆದರೆ ವಿಚಾರ ಒಂದೇ ಆಗಿದೆ. “ಕತ್ತಲೆ ಕಳೆದುಹೋಗುತ್ತಿದೆ” “ನಿಜವಾದ ಬೆಳಕು ಈಗ ಪ್ರಕಾಶಿಸುತ್ತದೆ.” ಎಂದು ಆತನು ಹೇಳುತ್ತಾನೆ (1 ಯೋಹಾನ 2:8). ನಂತರ ಆತನು ಪುನರುಚ್ಛರಿಸುತ್ತಾನೆ, “ಲೋಕವು ಗತಿಸಿಹೋಗುತ್ತಾಯಿದೆ” (1 ಯೋಹಾನ 2:17).

**ವಚನ 7.** ಪೌಲನು ಪ್ರಸಿದ್ಧಿಪಡಿಸಿದ ಜ್ಞಾನವು ಅವನು ಕಂಡುಹಿಡಿದ ಕೆಲವು ರಹಸ್ಯಗಳಲ್ಲ. ಬದಲಾಗಿ, ದೇವರು ಆತನಿಗೆ ಮೊದಲು ಮರೆಯಾಗಿದ್ದ **ರಹಸ್ಯಗಳನ್ನು** ಪ್ರಕಟಿಸಿದ್ದಾನೆ. ಕ್ರೂಜೆಯ ಮೂಲಕ ಗೊಂದಲದ ಪರಿಸ್ಥಿತಿ ಸ್ಪಷ್ಟವಾಗಿದೆ. “ರಹಸ್ಯ” ಏನಂದರೆ ವಿಶ್ವದ ಏಕೈಕ ದೇವರು ಎಲ್ಲಾ ಜನರಿಗೆ ಯೇಸುವಿನ ಮೂಲಕ ಜೀವದ ಬಾಗಿಲನ್ನು ತೆರೆದಿದ್ದಾನೆ (1:30). ದೇವರು ಐಗುಪ್ತದಿಂದ ವಿಮೋಚಿಸಿದ ಜನರು ಆತನು ಆಯ್ದುಕೊಂಡ ಜನರು ಸಹ ತಪ್ಪಾಗಿ ಭಾವಿಸಿದರು. ರಹಸ್ಯ ಅಥವಾ ಮರೆಯಾಗಿಡಲ್ಪಟ್ಟ **ಜ್ಞಾನವನ್ನು** ಹಿಂದಿನ ಕಾಲದಲ್ಲಿ ಗುರುತಿಸಲ್ಪಡಲಿಲ್ಲ; ಆದರೆ ಈಗ, ಸುವಾರ್ತೆಯನ್ನು ಸಾರುವದರ ಮೂಲಕ, ಅದು ಲೋಕಕ್ಕೆ ತೆರೆಯಲ್ಪಟ್ಟಿದೆ. ಈ ಕಲ್ಪನೆಯು ರೋಮ

16:25ರಲ್ಲಿ ಸ್ಪಷ್ಟವಾಗಿದೆ: ". . . ಅನಾದಿಯಿಂದ ಗುಪ್ತವಾಗಿ ಇಡಲ್ಪಟ್ಟ ಮರ್ಮವು." ಪೌಲನು ಇನ್ನೊಂದು ಸ್ಥಳದಲ್ಲಿ ರಹಸ್ಯದ ಕಲ್ಪನೆಗೆ ಮರಳುತ್ತಾನೆ. ಕ್ರಿಸ್ತನ ಮೂಲಕ ದೇವರ ಪ್ರಕಟಿಸುವಿಕೆ ಮೆಸ್ಸಿಯನು ಯೆಹೂದ್ಯರಿಗೆ ಮಾತ್ರ ವಿಮೋಚಕನಲ್ಲ; ಯೆಹೂದ್ಯೇತರರು ದೇವರ ರಾಜ್ಯಕ್ಕೆ ಸಹ ಬಾಧ್ಯಸ್ತರಾಗಿದ್ದಾರೆ (ಎಫೆಸ 3:4-6).

ಅಪೊಸ್ತಲನು "ರಹಸ್ಯ" (*mustērion*) ಎಂಬ ಪದವನ್ನು ಆಯ್ದುಕೊಳ್ಳುವಾಗ ಪ್ರಜ್ಞಾಪೂರ್ವಕವಾದ ಆಯ್ಕೆಯನ್ನು ಮಾಡಿದ್ದಾನೆ, ಗ್ರೀಕ್ ಮಾತನಾಡುವವರ ಲೋಕದಲ್ಲಿ ವಿಶೇಷವಾದ ವೈಶಿಷ್ಟತೆಯನ್ನು ಹೊಂದಿರುತ್ತದೆ. ಗ್ರೀಕ್ ಧರ್ಮದ ಒಂದು ಪ್ರಾಚೀನ ಅಂಶವೆಂದರೆ ಹಲವು ದೇವರು ಮತ್ತು ದೇವತೆಗಳ ವಿಗ್ರಹಗಳ ನೇತೃತ್ವವನ್ನು ವಹಿಸಿದ ಇವರಿಗೆ ರಹಸ್ಯಮಯ ಆಚರಣೆಗಳಾಗಿವೆ. ಗ್ರೀಕ್‌ರು ನೇತೃತ್ವದ "ರಹಸ್ಯಗಳು" ಎಂದು ಕರೆದಿದ್ದಾರೆ. ದೇಮಿತ್ರಿಯ ದವಸಧಾನ್ಯಗಳ ದೇವತೆಯ ಆರಾಧನೆಯು. ಡಯೋನಿಸ್ಸ, ದ್ರಾಕ್ಷೇಯ ದೇವರು, ಅದರೊಂದಿಗೆ ಸಂಭಂದ ಹೊಂದಿದ ರಹಸ್ಯಗಳಿಗೆ ಚಿರಪರಿಚಿತವಾಗಿವೆ, ಪೂರ್ವದಿಂದ, ಇತರ ರಹಸ್ಯಗಳು ಗ್ರೀಕ್ ಮಾತನಾಡುವವರ ಲೋಕದಲ್ಲಿ ತಮ್ಮ ಮಾರ್ಗಗಳನ್ನು ಕಂಡುಕೊಂಡವು, ಉದಾಹರಣೆಗೆ ಏಶಿಯಾ ಮೈನರದಿಂದ ಸೈಬೆಲ್ಗೆ ಮತ್ತು ಐಗುಪ್ತದಿಂದ ಐಸ್‌ಗೆ ಬೇಟಿನೀಡಿದವರು. ಪೌಲನು "ರಹಸ್ಯ" ಎಂಬ ಪದವನ್ನು ಮರುವ್ಯಾಖ್ಯಾನಿಸುತ್ತಾನೆ.

ಪೌಲನು ಕ್ರಿಸ್ತನ ಕುರಿತಾದ ಸಂದೇಶದ ತಕ್ಷಣದಲ್ಲಿ ಲೋಕದಲ್ಲಿ ಪ್ರಸರಿಸಲಿಲ್ಲ ಎಂದು ಹೇಳುವಲ್ಲಿ ಎಚ್ಚರವಹಿಸುತ್ತಾನೆ. ಕಷ್ಟಾನುಭವವನ್ನು ಅನುಭವಿಸಿದ ಕ್ರಿಸ್ತನ ಮೂಲಕ ಯೆಹೂದೇತರರನ್ನು ಮತ್ತು ಯೆಹೂದ್ಯರನ್ನು ರಕ್ಷಿಸುವ ದೇವರ ರಚನೆಯನ್ನು ವಿರಾಮಗಳ ಸಮಯದ ವರೆಗೆ ಹಿಂದಕ್ಕೆ ಎಳೆಯಲಾಯಿತು. ಕ್ರಿಸ್ತನು ಶ್ರಮೆ ತಾಳಲೇಬೇಕು ಅದನ್ನು ಬಿಟ್ಟರೆಬೇರೆ ಯಾವ ವಿಚಾರ ದೇವರಿಗೆ ಇರಲಿಲ್ಲ (ಲೂಕ 24:26; ಅ.ಕೃ. 17:3). ಯೇಸುವಿನ ಕುರಿತು ಧರ್ಮಶಾಸ್ತ್ರ ಮತ್ತು ಪ್ರವಾದನೆಗಳಲ್ಲಿ ಮಾತನಾಡಿದ್ದಾನೆ (ಲೂಕ 24:44). ಈ ಅರ್ಥದಲ್ಲಿ, ಆತನ ಯೋಜನೆಯು ಪೂರ್ವ ಯೋಜಿತವಾಗಿತ್ತು. ಸತ್ಯವೇದದಲ್ಲಿ ಪೂರ್ವಕಲ್ಪಿತವಾದದ್ದು ಸಂಗತಿಗಳಲ್ಲಿ ದೇವರ ಮಾರ್ಗದರ್ಶನದ ಪರಿಣಾಮ ಮಾನವ ಕುಲದ ರಕ್ಷಣೆ. ದೇವರು ಕೆಲವರನ್ನು ರಕ್ಷಿಸಬೇಕು ಮತ್ತು ಕೆಲವರನ್ನು ಅವರ ಹುಟ್ಟುವ ಪೂರ್ವದಲ್ಲಿಯೇ ಶಿಕ್ಷಿಸಬೇಕೆಂದು ಪೂರ್ವ ನಿರ್ಧಾರಮಾಡಿರಲಿಲ್ಲ. ಜನರ ವಯಕ್ತಿಕ ರಕ್ಷಣೆಗೆ ಸುವಾರ್ತೆಯನ್ನು ಆಲಿಸುವದು ಅಗತ್ಯವಾಗಿತ್ತು. ಅದಾದನಂತರ, ಕೇಳಿದವರು ನಿರ್ಧಾರವನ್ನು ತೆಗೆದುಕೊಳ್ಳಲು ಕರೆನೀಡಲಾಗುತ್ತಿತ್ತು (ರೋಮಾ 10:14). ಕ್ರಿಸ್ತನಿಗಿಂತ ಎರಡನೂರು ವರ್ಷಗಳ ಪೂರ್ವದಲ್ಲಿ ಜೀವಿಸುತ್ತಿದ್ದ ಯೆಹೂದ್ಯ ಜ್ಞಾನಿಗಳು ಇದನ್ನು ಉತ್ತಮವಾಗಿ ಹೇಳಿದ್ದಾನೆ:

> ದೇವರು ಆದಿಯಲ್ಲಿ ಮನುಷ್ಯನನ್ನು ನಿರ್ಮಿಸಿದಾಗ ಅವನಿಗೆ ತನ್ನ ಆಯ್ಕೆಯ ಸ್ವಾತಂತ್ರವನ್ನು ನೀಡಿದ್ದನು.
> ನೀವು ಆಯ್ಕೆ ಮಾಡಿಕೊಂಡರೆ ನೀವು ಆಜ್ಞೆಗಳಿಗೆ ವಿಧೇಯರಾಗುತ್ತೀರಿ; ಇದು ಆತನ ಚಿತ್ತವನ್ನು ನೆರವೇರಿಸಲು ಇರುವ ನಿಷ್ಠೆ.
> ನಿಮ್ಮ ಮುಂದೆ ಬೆಂಕಿ ಮತ್ತು ನೀರು ಎರಡೂ ಇಡಲ್ಪಟ್ಟಿದೆ; ನೀವು ಯಾವುದನ್ನು ಆಯ್ದುಕೊಳ್ಳುತ್ತೀರೋ, ನಿಮ್ಮ ಕೈಗಳನ್ನು ಚಾಚಿರಿ.
> ಮನುಷ್ಯನ ಎದುರಿನಲ್ಲಿ ಜೀವ ಮತ್ತು ಮಗಳ ಎರಡೂ ಇಡಲ್ಪಟ್ಟಿವೆ, ಅವನು

ಯಾವುದನ್ನು ಆಯ್ದುಕೊಳ್ಳುತ್ತಾನೋ ಅದು ಅವನಿಗೆ ಕೊಡಲ್ಪಡುತ್ತದೆ.[3]

**ವಚನ 8.** ಪೌಲನ ಕ್ರೂಜೆಯ ವಿಷಯವನ್ನು ಪ್ರಸಂಗಿಸುವಾ ಜೊತೆಯಲ್ಲಿ ಇದ್ದ ಜ್ಞಾನವು ಬೇರೆ ಕ್ರಮ ಅದು ಸಮಕಾಲಿನ ಬೀದಿ ತತ್ವಜ್ಞಾನಿಗಳಿಂದ ನೀಡಲಾಗಿತ್ತು. ಕೇಂದ್ರ ಸ್ಥಳಗಳಲ್ಲಿ ಅಲೆಮಾರಿ ಭಾಷಣಕಾರರನ್ನು, ಕೆಲವರು ದ್ವೇಷಮಾಡಿದರು ಮತ್ತು ಕೆಲವರು ಮೆಚ್ಚಿಕೊಂಡರು, **ಇಹಲೋಕಾಧಿಪತಿಗಳೊಂದಿಗೆ** ಒಟ್ಟಾಗಿ, ದೇವರ ಜ್ಞಾನದಲ್ಲಿ ತಮ್ಮ ಅಜ್ಞಾನವನ್ನು **ಮಹಿಮೆಯ ಕರ್ತನನ್ನು ಶಿಲುಬೆಗೆ ಹಾಕಿದಾಗ ಪ್ರದರ್ಶಿಸಿದರು**. ಕೊರಿಂಥದ ಕ್ರೈಸ್ತರಿಗೆ, ಕ್ರೂಜೆಯ ಅಡಿಯಲ್ಲಿ ನಿಲ್ಲಲು ಐಕ್ಯತೆಯ ಸ್ಯೆನ್ಯವನ್ನು ನೀಡುವದು ಅಗತ್ಯವಾಗಿತ್ತು. ಪೌಲನ ಓದುಗರು, ಲೋಕದ ಶ್ರೇಷ್ಠ ಪುರುಷರು ದೇವರ ಜ್ಞಾನವನ್ನು ಅರಿತಿರಲಿಲ್ಲ. ದೇವರ ಕುರಿತು ಅವರ ಅಜ್ಞಾನ ಹಾಸ್ಯಾಸ್ಪದವಾದ ಪರಿಣಾಮವನ್ನು ನೀಡಿತು: ಯಾರು ದ್ವೇಷಿಸಿದರೋ ಮತ್ತು ಯೇಸುವಿಗೆ ಭಯಪಟ್ಟರೋ ಅವರು ಅವನನ್ನು ಕ್ರೂಜೆಗೆ ಹಾಕುವದರ ಮೂಲಕ ದೇವರ ಚಿತ್ತವನ್ನು ನೆರವೇರಿಸಿದರು. ಅದು "ನಮ್ಮ ಮಹಿಮೆಗಾಗಿ" (2:7) "ಮಹಿಮೆಯ ಕರ್ತನು" ಕ್ರೂಜೆಯ ರಹಸ್ಯವನ್ನು ಮೇಲಿನ ಜ್ಞಾನದಿಂದ ತಿಳಿದುಕೊಳ್ಳುವಂತೆ ಮಾಡಿದನು.

ಈ ಒಂದು ಸಂದರ್ಭದಲ್ಲಿ ಪೌಲನು ಯೇಸುವನ್ನು ಗುರುತಿಸಲು "ಮಹಿಮೆಯ ಕರ್ತನು" ಎಂದು ಉಪಯೋಗಿಸಿದ್ದಾನೆ. ಅವನ ಅರ್ಥದಲ್ಲಿ ನೈಜ್ಯತೆಯಿದೆ. ವಂಶಸೂಚಕ (τῆς δόξης, *tēs doxēs*) ವಿಷಯವು ವಿಶೇಷಣ ಸಂಬಂಧವಾಗಿದೆ, ಅದು "ಮಹಿಮೆಯುಳ್ಳ ಕರ್ತನು" ಅದೇ ವಾಕ್ಯಾವನ್ನು ಯಾಕೋಬ 2:1ರಲ್ಲಿ NASB ಹೀಗೆ ಅನುವಾದಿಸುತ್ತದೆ. "ನಮ್ಮ ಮಹಿಮೆಯುಳ್ಳ ಕರ್ತನಾದ ಯೇಸು ಕ್ರಿಸ್ತನು." ಪರ್ಯಾಯವಾಗಿ ಪೌಲನು ದೇವರ ಉನ್ನತ ಮತ್ತು ಪರಿಶುದ್ಧವಾದ ಮಾರ್ಗಗಳನ್ನು "ಮಹಿಮೆ" ಎಂಬ ಪದದೊಂದಿಗೆ ಹೇಳಿರಬಹುದು. ಯೇಸು ಇವೆಲ್ಲದರಲ್ಲಿ ಶ್ರೇಷ್ಟ ಅವತಾರವಾಗಿದ್ದಾನೆ. ಮೂರನೆಯ ಸಾಧ್ಯತೆ ಪೌಲನ ಮನಸ್ಸಿನಲ್ಲಿ ಪರಲೋಕದಲ್ಲಿ ಆತನು ದೇವರ ಬಲಗಡೆಯಲ್ಲಿ ಆಸೀನನಾಗಿರುವಾಗ, ದೇವರು ಯೇಸುವಿಗೆ ನೀಡಿದ ಮಹಿಮೆಯ ವಿಚಾರವಿರಬಹುದು.

**ವಚನ 9.** ಹೇಳಿಕೆಯ ಮೂಲವು ಅನಿಶ್ಚಿತವಾಗಿರಬಹುದು ಯೆಶಾಯ 64:4 (64:3; LXX), ರ ಉಚಿತವಾದ ಕೊಡುಗೆಯಾಗಿರಬಹುದು. ಹಾಗೂ ಯೆಶಾಯ ಮತ್ತು ಪೌಲನು ಹೇಳಿದ ಅಂಶಗಳು ಗಣನೀಯವಾಗಿ ವಿಭಿನ್ನವಾಗಿವೆ. ಪೌಲನು ಸಾಮಾನ್ಯವಾಗಿ ಹಳೆ ಒಡಂಬಡಿಕೆಯಲ್ಲಿ **ಹೀಗೆ ಬರೆಯಲ್ಪಟ್ಟಿದೆ** ಇದು ಬರೆದಿರುವ ಹೇಳಿಕೆಯನ್ನು ಅನುಸರಿಸಿದ್ದಾನೆ (ರೋಮ 15:3, 9 LXX ರಲ್ಲಿದ್ದಂತೆ), ಆದರೆ ಇಲ್ಲಿ ಆತನು ಅಪ್ರತ್ಯಕ್ಷವಾಗಿ ಸತ್ಯವೇದದಿಂದ ಹೊರಗೆ ಇರುವ ಮೂಲದಿಂದ ಹೇಳಿಕೆಯನ್ನು ನೀಡುತ್ತಾನೆ. ಅದು ಆತನ ಸಾಮಾನ್ಯ ಅಭ್ಯಾಸ ಆಗಿರದೇ ಇರುವದರಿಂದ, ಇದು ಸಂಭವನೀಯವಲ್ಲ. ಇನ್ನೊಂದು ಸಾಧ್ಯತೆ ಅವನು ಸುವಾರ್ತೆಗಳಲ್ಲಿ ದಾಖಲಿಸದೇ ಇರುವ ಯೇಸುವಿನ ಒಂದು ಹೇಳಿಕೆಯನ್ನು ಉಲ್ಲೇಖಿಸುತ್ತಿದ್ದಾನೆ. ಇಲ್ಲವಾದಲ್ಲಿ ಪೌಲನು ಅ.ಕೃ. 20:35 ರಲ್ಲಿರುವ ಕರ್ತನ ಇನ್ನೊಂದು ಹೇಳಿಕೆಯನ್ನು ಉಲ್ಲೇಖಿಸುತ್ತಿರಬಹುದು. ಅವನು ಬರೆಯಲ್ಪಟ್ಟ ಹೇಳಿಕೆಯನ್ನು ಸೂಚಿಸುತ್ತಿರುವಲ್ಲಿ, ಅವನು ಹಳೆ ಒಡಂಬಡಿಕೆಯ ಒಂದು ವಿಚಾರವನ್ನು ಸಂಕ್ಷಿಪ್ತಗೊಳಿಸಿರಬಹುದು.

ಯೆಶಾಯನು ಹೀಗೆ ಬರೆಯುತ್ತಾನೆ, "ದೇವರನ್ನೂ ಆದಿಯಿಂದ ಯಾರೂ ಕೇಳಲಿಲ್ಲ

ಯಾರ ಕಿವಿಗೂ ಬೀಳಲಿಲ್ಲ, ಯಾರ ಕಣ್ಣೂ ಕಾಣಲಿಲ್ಲ" (ಯೆಶಾಯ 64:4). ಉತ್ತಮವಾದ ವಿವರಣೆ ಯಾವುದೆಂದರೆ ಈ ವಚನದಲ್ಲಿರುವ ಪೌಲನ ನಿಖರವಲ್ಲದ ಉಲ್ಲೇಖ, ಅಧಿಕಾರವುಳ್ಳ ಕ್ರಿಸ್ತನು ಅಪೊಸ್ತಲನಿಗೆ, ಪ್ರೇರೆಪಿಸಲ್ಪಟ್ಟದ್ದು ಎಂಬತ್ತ ಕೊಂಡೊಯ್ಯುತ್ತದೆ, ಹೀಗೆ, ಆತನು ಯೆಶಾಯನ ಪುಸ್ತಕದಲ್ಲಿ ಈ ಹೇಳಿಕೆಯನ್ನು ಪ್ರವಾದಿಯು ಹೇಳಿರುವ ಹೇಳಿಕೆಯ ಹೊಸ ಅಂಶದತ್ತ ಎಳೆಯಲು ವಿಸ್ತರಿಸಿದ್ದಾನೆ. ಆತ್ಮನ ಮೂಲಕ ದೇವರು ನೀಡಿದ ಪ್ರಕಟನೆಯ ಮೇಲೆ ಆತುಕೊಳ್ಳುತ್ತಾನೆ (1 ಕೊರಿಂಥ 2:10), ಅವನು ಯೆಶಾಯ 64:4 ಮತ್ತು 65:16 ರಲ್ಲಿರುವ ಪದಗಳ ಭಾಗಗಳನ್ನು ಅವುಗಳ ಸಮಂಜಸತೆಗಾಗಿ ಎತ್ತಿಕೊಂಡು ತನಗೆ ಸರಿತೋರಿದ ವಿಚಾರವನ್ನು ವಿಸ್ತರಿಸಿದ್ದಾನೆ. ಅಪೊಸ್ತಲನು ಯೆಶಾಯನ ಪುಸ್ತಕದಲ್ಲಿರುವ ಸನ್ನಿವೇಶ ಕೊರಿಂಥದಲ್ಲಿರುವ ತನ್ನ ಓದುಗರು ತಿಳಿದುಕೊಳ್ಳಬೇಕೆಂದು ತಾನು ಬಯಸುವ ಇದೇ ಅಂಶವನ್ನು ಬೋಧಿಸುತ್ತಾನೆ ಎಂಬ ಹೇಳಿಕೆಯನ್ನು ನೀಡಿಲ್ಲ. ಬದಲಾಗಿ ಪೌಲನು ಯೆಶಾಯನ ಪುಸ್ತಕದಲ್ಲಿರುವ ದೇವರ ಕುರಿತಾದ ಪದಗಳನ್ನು **ಕಣ್ಣು ಕಾಣದಿರುವ ಮತ್ತು ಕಿವಿ ಕೇಳದಿರುವ** ಅವರ್ಣನೀಯ ಜ್ಞಾನ ಮತ್ತು ಬಲವೆಂದು - ಕೊರಿಂಥದಲ್ಲಿಯ ಸನ್ನಿವೇಶದೊಂದಿಗೆ ಹೋಲಿಸಲು ಕಂಡುಕೊಂಡಿದ್ದಾನೆ.

ಯೆಶಾಯನ ಪದಗಳು ಪೌಲನ ಎರಡು ಸತ್ಯಗಳನ್ನು ತಿಳಿಸಲು ಸಹಾಯಕವಾಗಿವೆ. ಮೊದಲನೆಯದಾಗಿ, ಅವನು ಕ್ರಿಸ್ತನ ಮತ್ತು ಕ್ರೂಜಿತನಾದವನ ಸಂದೇಶದಲ್ಲಿ ಪ್ರದರ್ಶಿಸಲ್ಪಟ್ಟ ದೇವರ ಜ್ಞಾನವು ಈಗಾಗಲೇ, ದೇವಜನರಿಗೆ ದೊರೆತ, ಮಾನವನ ಊಹೆಗೆ ನಿಲುಕದಿರುವ ಆಶೀರ್ವಾದವಾಗಿದೆ. ಎರಡನೆಯದಾಗಿ, ಇನ್ನೂ ಹೆಚ್ಚಿನ ಆಶೀರ್ವಾದಗಳು, **ಆತನನ್ನು ಪ್ರೀತಿಸುವ ಎಲ್ಲಾ ಜನರಿಗಾಗಿ ಸಿದ್ಧಪಡಿಸಿರುವ ದೇವರ ಆಶೀರ್ವಾದಗಳು** ದೊರೆಯಬೇಕಾಗಿದೆ.

ಇತರ ಜನರಂತೆ ಆ ಸಮಯದಲ್ಲಿ ಜೀವಿಸುತ್ತಿದ್ದ, ಪೌಲನು ಅಲಂಕಾರಿಕವಾಗಿ **ಹೃದಯವು** ಮಾನವನ ಆಲೋಚನೆಗಳಿಗೆ ಕೇಂದ್ರವಾಗಿದೆ ಎಂದು ಹೇಳುತ್ತಾನೆ. ಅವನು ಮತ್ತು ಅವನ ಸಮಕಾಲೀನರು ಹೊಟ್ಟೆಯ ಒಳಭಾಗ, ಹಲವು ಸನ್ನಿವೇಶಗಳಲ್ಲಿ ಮೂತ್ರಪಿಂಡಗಳು, ಭಾವನೆಗಳ ಸ್ಥಾನವಾಗುತ್ತವೆ. ಪೌಲನು, ಉದಾಹರಣೆಗೆ, ಫಿಲೆಮೋನನಿಗೆ, ಓನೆಸೀಮನನ್ನು ತಿರುಗಿ ಮನೆಗೆ ಕಳುಹಿಸುತ್ತಿದ್ದೇನೆ ಎಂದು ಹೇಳುವಾಗ, ಆತನನ್ನು "ನನಗೆ ಪ್ರಾಣದಂತಿರುವ" ಎಂದು ಅವನನ್ನು ಕರೆಯುತ್ತಾನೆ (ಫಿಲೆಮೋನ 12). ವಾಸ್ತವವಾಗಿ, ಪೌಲನು ಆ ದಾಸನನ್ನು ತನ್ನ ಸ್ವಂತ "ಹೊಟ್ಟೆಯ ಒಳಭಾಗ." "ಪ್ರಾಣ" ಪಾಪಿಯ ಆಂತರ್ಯದ ಆಲೋಚನೆ ಮತ್ತು ಭಾವನೆಗಳ ಚಿತ್ತವನ್ನು ಒಳಗೊಂಡು ಸಂಪೂರ್ಣ ಜೀವಿತಕ್ಕೆ ಸೂಚನೆಯಾಗಿದೆ. ಆದಾಗ್ಯೂ ಕೆಲವೊಮ್ಮೆ ಅದು ಇವುಗಳಲ್ಲಿ ಒಂದಲ್ಲಾ ಇನ್ನೊಂದನ್ನು ಆತುಕೊಂಡಿದೆ.[4]

### ದೇವರ ಆತ್ಮವಾಗಿದೆ (2:10-13)

**10ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. 11ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ**

**ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. [12]ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. [13]ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳಿದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಭದವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ.**

**ವಚನ 10.** ಅಪೊಸ್ತಲನು ಯೆಶಾಯನಿಂದ ವಾಕ್ಯಂಗವನ್ನು ತನ್ನ ಓದುಗರಿಗೆ ಕ್ರೈಸ್ತರು ಅಪ್ಪಿಕೊಳ್ಳುವ ಪ್ರಭುದ್ಧವಾದ ಜ್ಞಾನವು ಇಹಲೋಕಾಧಿಪತಿಗಳು ಉಪಯೋಗಿಸುವ, ಹೋಲಿಕೆಗೆ ಸಾಧ್ಯವಿಲ್ಲದಿರುವ ಶ್ರೇಷ್ಠ ಜ್ಞಾನವಾಗಿದೆ ಎಂದು ಮನದಟ್ಟುಮಾಡಲು ತೆಗೆದುಕೊಂಡಿದ್ದಾನೆ. ಅದರ ಶ್ರೇಷ್ಠತೆಯು **ಅದು . . . ಆತ್ಮನ ಮೂಲಕ ಪ್ರಕಟಿಸಲ್ಪಟ್ಟದ್ದರಲ್ಲೇ ಅಡಗಿದೆ**. ಪೌಲನು ತನ್ನ ಓದುಗರನ್ನು ಆತ್ಮನ ಕುರಿತಾಗಿ ಯೋಚಿಸಲು ಎಳೆಯುತ್ತಿರುವ ಹಾಗೆ, ಅವನು ಸರ್ವನಾಮಪದದ ಪ್ರಥಮ ಪುರುಷ ನಮಗೆ ಎಂಬುದನ್ನು ಬಹುವಚನದಲ್ಲಿ ಉಪಯೋಗಿಸುತ್ತಾನೆ. 2:12, 13ರಲ್ಲಿ, ಅವನು "ನಾವು" ಅಥವಾ "ನಮಗೆ" ಪೂರಕವಾಗಿ ನಾಲ್ಕು ಸಾರಿ ಬರೆಯುತ್ತಾನೆ. ಪೌಲನು ಯಾರನ್ನು ತನ್ನೊಂದಿಗೆ ಸೇರಿಸಿಕೊಳ್ಳುತ್ತಿದ್ದಾನೆ? ಒಂದು ಸಾಧ್ಯತೆ ಏನಂದರೆ ಅವನು ಅಪೊಸ್ತಲಿಕ ಅಧಿಕಾರವನ್ನು ದೃಢಪಡಿಸಲು ಬಯಸುತ್ತಿದ್ದಾನೆ. ಪೌಲ ಮತ್ತು ಇತರ ಅಪೊಸ್ತಲರು ದೇವರಿಂದ ಪ್ರಕಟನೆಯನ್ನು ಹೊಂದಿದರು ಅದು ಲೋಕದ ಜ್ಞಾನವನ್ನು ಮೀರುತ್ತದೆ. ಇದರೊಟ್ಟಿಗೆ, ಅಪೊಸ್ತಲಿಕ ಅಧಿಕಾರವನ್ನು ಗುರುತಿಸುವದು ಸಭೆಯಲ್ಲಿ ತೊಂದರೆಯನ್ನು ನೀಡುತ್ತಿರುವ ಭೇದವನ್ನು ಪರಿಹರಿಸುತ್ತದೆ. ಹಾಗೂ ಪೌಲನು ತಕ್ಷಣದ ಸನ್ನಿವೇಶದಲ್ಲಿ ಇತರ ಅಪೊಸ್ತಲರ ಕುರಿತು ಯಾವುದೇ ಉಲ್ಲೇಖವನ್ನು ತಿಳಿಸಿಲ್ಲ. "ನಾವು" ಪೌಲನು ತನ್ನ ಓದುಗರೊಂದಿಗೆ ತನ್ನ ವ್ಯಕ್ತಿತ್ವವನ್ನು ಮತ್ತು ವಿಶ್ವಾಸದ ಸಂಬಂಧವನ್ನು ಸಂಪಾದಿಸಿದ ಮೃದುವಾದ ಮಾರ್ಗವಾಗಿದೆ ಎಂದು ಉತ್ತಮವಾಗಿ ತಿಳಿದುಕೊಂಡ ಪದವಾಗಿದೆ. ಆತ್ಮನಿಂದ ಹೊಂದಿರುವ ನೇರವಾದ ಪ್ರಕಟನೆಯಿಂದ, **ಆತನು ಎಲ್ಲಾ ಸಂಗತಿಗಳನ್ನು ಸಂಶೋಧಿಸಲು ಶಕ್ತನಾಗಿದ್ದಾನೆ**, ದೇವರ ಸತ್ಯದ ಆಳಗಳನ್ನು ಸಹ. ಕೊರಿಂಥದಲ್ಲಿರುವ ಸಹೋದರರು ಈ ಪುಸ್ತಕವನ್ನು ಓದುತ್ತಿರುವ ಹಾಗೆ ಪೌಲನ ಪ್ರಕಟನೆಗಳನ್ನು ಆತನ ಪದಗಳನ್ನು ಓದುವದರ ಮೂಲಕ ಹಂಚಿಕೊಳ್ಳುತ್ತಾರೆ.

**ವಚನ 11.** ಅವನು **ಮನುಷ್ಯನ ಆತ್ಮದ** ಕುರಿತು ಬರೆಯುವಾಗ, ಪೌಲನು ನಿಜವಾಗಿಯೂ ಮನುಷ್ಯನೇ ಎಂದು ಅರ್ಥೈಸಿದ್ದಾನೆ, ಅವನ ಮನಸ್ಸು ಮತ್ತು ವಯಕ್ತಿಕ ಆಲೋಚನೆಗಳು. ಒಬ್ಬ ವ್ಯಕ್ತಿಯ ಉದ್ದೇಶ ಮತ್ತು ಬಯಕೆಯನ್ನು ಅವನೇ ತಿಳಿದುಕೊಳ್ಳುವ ವಿಧದಲ್ಲಿ ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ.ವ್ಯಕ್ತಿ ಮತ್ತು ವ್ಯಕ್ತಿಯ ಆತ್ಮ ಒಂದೇ ಆಗಿರುತ್ತದೆ.

> ಪೌಲನು ಒಬ್ಬ ಮನುಷ್ಯ ಅವನ ಚಿತ್ತ, ಅವನ ವೃತ್ತಿ, ಅವನ ಸ್ವಂತಿಕೆ ಒಬ್ಬನ ದೇಹದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ದೇಹವು ಆ ಮನುಷ್ಯನು ಏನಾಗಿದ್ದಾನೋ ಅದಾಗಿದೆ; ಅದು ಒಬ್ಬನು ಜೀವಿಸು ಮತ್ತು ಸಾಯುವ ಉದ್ದೇಶವನ್ನು ಪ್ರಕಟಿಸುತ್ತದೆ, ಅಥವಾ

ಉತ್ತಮವಾಗಿ, ಇನ್ನೊಬ್ಬ ವ್ಯಕ್ತಿಗೆ ಒಬ್ಬನು ಸಾಯುವದು ಮತ್ತು ಜೀವಿಸುವದು ಎರಡನ್ನೂ ಪ್ರಕಟಿಸುತ್ತದೆ (ರೋಮಾ 14:7-9).[5]

ವ್ಯಕ್ತಿಯ ದೇಹ ಮತ್ತು ಅವನ ಆತ್ಮಗಳ ಮಧ್ಯದಲ್ಲಿರುವ ಐಕ್ಯತೆ ಕ್ರೈಸ್ತರಿಗೆ ದೇವರ ಆತ್ಮನು ಹೇಗೆ ತಾನು ದೇವರಾಗಿದ್ದಾನೆ ಎಂಬುದನ್ನು ಪ್ರಕಟಿಸುತ್ತಾನೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ತ್ರಯೇಕತ್ವದ ವಿವರವಾದ ಸಿದ್ಧಾಂತವನ್ನು ಬೆಳೆಸಿಕೊಳ್ಳದೆ, ಅಪೊಸ್ತಲನು ಪವಿತ್ರಾತ್ಮನು ದೇವರ ಅಸ್ತಿತ್ವದಲ್ಲಿ ಭಾಗಿಯಾಗಿದ್ದಾನೆ ಎಂದು ಸೂಚಿಸುತ್ತಾನೆ. **ದೇವರ ಆತ್ಮನು ಮಾತ್ರ ದೇವರ ಆಲೋಚನೆಗಳನ್ನು** ಬಲ್ಲವನಾಗಿದ್ದಾನೆ. ಇನ್ನೂ ಮುಂದಕ್ಕೆ "ದೇವರ ಆತ್ಮನು" ವಿಶ್ವಾಸಿಗಳಲ್ಲಿ ಕಾರ್ಯಮಾಡುತ್ತಾನೆ, ಅವರನ್ನು ದೇವರನ್ನು ತಿಳಿದುಕೊಳ್ಳಲು ಮತ್ತು ತನ್ನ ಕರೆಗೆ ಉತ್ತರಕೊಡುವವರಿಗೆ ದೇವರು ನೀಡುವ ಆಶೀರ್ವಾದಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವನ್ನು ನೀಡುತ್ತಾನೆ. ಕ್ರೈಸ್ತರಿಗೆ ದೇವರ ಜ್ಞಾನಕ್ಕೆ ಆತ್ಮನ ಮೂಲಕ ಮಾರ್ಗವಿದೆ. ಲೋಕದ ಜ್ಞಾನವು "ಗತಿಸಿಹೋಗುತ್ತದೆ" (2:6) ಆದರೆ ದೇವರ ಜ್ಞಾನವು "ತನ್ನನ್ನು ಪ್ರೀತಿಸುವವರಿಗೆ ದೇವರು ಸಿದ್ಧಮಾಡಿದ" ಮಹಿಮೆಯನ್ನು ಪ್ರಕಟಿಸುತ್ತದೆ (2:9).

**ವಚನ 12.** ಕೊರಿಂಥದಲ್ಲಿರುವ ಕ್ರೈಸ್ತರಿಗೆ ಪೌಲನು ನೀಡಿದ ಜ್ಞಾನ ಅವರು **ದೇವರಿಂದ ಬಂದ ಆತ್ಮನಲ್ಲಿ** ಅವರು ಹಂಚಿಕೊಂಡುದದರ ಪರಿಣಾಮವಾಗಿತ್ತು. ದೇವರಿಂದ ಬಂದ ಜ್ಞಾನವು **ಲೋಕದ ಆತ್ಮನು** ಪ್ರೇರೆಪಿಸಿದ ಜ್ಞಾನಕ್ಕಿಂತ ಸಂಪೂರ್ಣವಾಗಿ ಬೇರೆ ಕ್ರಮದಲ್ಲಿತ್ತು. "ಲೋಕದ ಆತ್ಮ" ಇದು ಸ್ವ-ಪ್ರಜ್ಞೆಯ ಸೊತ್ತಲ್ಲ; ಅದು ಮನಸ್ಸಿನ ಚೌಕಟ್ಟಿನಲ್ಲಿ ಆತ್ಮವಿಶ್ವಾಸ, ಅಧಿಕಾರ ಬಲ, ಇಂದ್ರಿಯ ಸುಖಸಂತೋಷಕ್ಕಾಗಿ ನೀಡಿದ ಅಮೂರ್ತವಾದ ಕಲ್ಪನೆಯಾಗಿದೆ. ಪರಲೋಕವನ್ನು ಮುಟ್ಟುವ ಗೋಪುರವನ್ನು ಕಟ್ಟುವಂತ ಗುರಿಯಲ್ಲಿ ತಲ್ಲೀನವಾಗಿರುವಂಥದ್ದಾಗಿದೆ (ಆದಿ 11:4), ಮನುಷ್ಯನು ತನ್ನ ಬುದ್ಧಿವಂತಿಕೆಯಲ್ಲಿ ಮುಳುಗಿಹೋಗಿರುತ್ತಾನೆ. ತನ್ನನ್ನು ತಾನು ಜ್ಞಾನಿಯೆಂದು ಹೇಳಿಕೊಳ್ಳುವಂತವನು, ಜನರು "ಲೋಕದ ಆತ್ಮನ" ಆಕರ್ಷಣೆಗೆ ಒಳಗಾಗಿ ತಮ್ಮನ್ನು ತಾವು ಬುದ್ಧಿಹೀನರೆಂದು ಸಿದ್ಧಾಂತಪಡಿಸಿಕೊಳ್ಳುತ್ತಾರೆ (ರೋಮಾ 1:22).

"ಲೋಕದ ಆತ್ಮನಂತೆ" "ದೇವರಿಂದ ಬಂದ ಆತ್ಮ" ಸ್ವಂತಿಕೆಯಿಂದ ಕೂಡಿದ ವ್ಯಕ್ತಿ ದೇವರ ಸತ್ಯವನ್ನು ಪ್ರಕಟಿಸುವದಕ್ಕಾಗಿ ಮಾನವನ ಸಮಯಕ್ಕೆ ಬರುತ್ತಾನೆ. ದೇವರಿಂದ ಬಂದ ಆತ್ಮ ಮನುಷ್ಯನ ಹೃದಯಗಳಲ್ಲಿ ದೇವರ ಪ್ರೀತಿಯನ್ನು ಸುರಿಸುತ್ತಾನೆ (ರೋಮಾ 5:5). ಕೊರಿಂಥದ ವಿಶ್ವಾಸಿಗಳಲ್ಲಿ ಆತ್ಮನಿಂದ ತುಂಬಲ್ಪಟ್ಟವರು ಮೋಸ, ನಾಶನ, ಮೋಹಗೊಳಿಸುವ ಧ್ವನಿಯನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ, ಇದರಿಂದಾಗಿ **ಅವರು ದೇವರಿಂದ . . . ಉಚಿತವಾಗಿ ಕೊಡಲ್ಪಟ್ಟ ಜ್ಞಾನವನ್ನು ತಿಳಿದುಕೊಳ್ಳಬಹುದು**.

ಪೌಲನ ಉದ್ದೇಶ ಈ ಕ್ರೈಸ್ತರಿಗೆ ಭರವಸೆಯನ್ನು ನೀಡುವದಾಗಿದೆ. ಕ್ರೂಜೆಯ ಸಂದೇಶ ಲೋಕದ ಜ್ಞಾನವನ್ನು ಜಾಲದಲ್ಲಿ ಸಿಕ್ಕಿಸುವದಲ್ಲ; ಆದರೆ ಆ ಕಾರಣದಿಂದಾಗಿ ಅದನ್ನು ತೊರೆದುಬಿಡುವದಿಲ್ಲ. "ದೇವರಿಂದ ಬಂದ ಆತ್ಮನು" ದೇವರು ತನ್ನ ಜನರಿಗೆ ವಾಗ್ದಾನ ಮಾಡಿದ ಎಲ್ಲಾ ಒಳ್ಳೇ ವರಗಳನ್ನು ತಿಳಿದುಕೊಳ್ಳಲು ವಿಶ್ವಾಸಿಗಳನ್ನು ಶಕ್ತರನ್ನಾಗಿಸುತ್ತದೆ, ಅದೇ ಸಮಯದಲ್ಲಿ "ಲೋಕದಿಂದ ಬಂದ ಆತ್ಮನು" ಏನನ್ನೂ ನೀಡುವದಿಲ್ಲ.

**ವಚನ 13.** ಅಪೊಸ್ತಲನು ಕೊರಿಂಥದವರಿಗೆ "ದೇವರು ಉಚಿತವಾಗಿ ನೀಡಿದ

ಸಂಗತಿಗಳನ್ನು" ಆತ್ಮನ ಮೂಲಕ ನೀಡಿರುವದನ್ನು ತಿಳಿಯಪಡಿಸುತ್ತಾನೆ. ವಚನ 13a, **ನಾವು ಮಾತನಾಡುವ ಸಂಗತಿಗಳು ಸಹ** ಎಂದು ಹೇಳುತ್ತದೆ. ಪೌಲನು ಆತ್ಮನು ತನ್ನ ಮೂಲಕ ಅವನು ಮಾತನಾಡುವ ಮತ್ತು ಬರೆಯುವ ಪ್ರಕಟನೆಗಳನ್ನು ನಿವೇದಿಸಲು ಕಾರ್ಯಮಾಡುತ್ತಿದ್ದಾನೆ ಎಂಬುದನ್ನು ತಿಳಿದುಕೊಂಡಿದ್ದನು (ಎಫೆಸ್ಸ 3:3, 4 ನೋಡಿರಿ). ಅವನು ಬರೆದಿರುವದು ದೇವರ ಆಜ್ಞೆಯಂತೆ ಕೊರಿಂಥದವರು ಹೊಂದಿಕೊಳ್ಳಲಿದ್ದಾರೆ (1 ಕೊರಿಂಥ 14:37). ಕೊರಿಂಥದವರಿಗೆ **ಅವನ ಎಚ್ಚರಿಕೆ ಮಾನುಷಜ್ಞಾನವು ಬೋಧಿಸಿದ ಮಾತುಗಳಿಂದ ಅಲ್ಲ ಆದರೆ ಆತ್ಮನಿಂದ ಬೋಧಿಸಲ್ಪಟ್ಟಂತವುಗಳಾಗಿವೆ**. ತಮ್ಮ ಮೂಲವನ್ನು ಆತ್ಮನಿಂದ ಹೊಂದಿದ ಪದಗಳು ಕೊರಿಂಥದಲ್ಲಿರುವ ಸಭೆಯಲ್ಲಿರುವ ಸೀಳುಗಳನ್ನು ಗುಣಪಡಿಸುವಂಥದ್ದಾಗಿದೆ. ಅವರು ಸದಸ್ಯರನ್ನು "ಒಂದೇ ಮನಸ್ಸನ್ನು ಒಂದೇ ಅಭಿಪ್ರಾಯದ" ಮೇಲೆ ನೆಲೆಗೊಳಿಸುತ್ತಾರೆ (1:10).

**ಒಟ್ಟುಗೂಡಿಸು** ಎಂದು ಅನುವಾದಿಸಲಾದ (συγκρίνω, *sunkrinō*) ಕ್ರಿಯಾಪದವು ಹೊಸ ಒಡಂಬಡಿಕೆಯಲ್ಲಿ ಕೇವಲ 2:13c ಮತ್ತು ಇನ್ನೆರೆಡು ಸಮಯಗಳಲ್ಲಿ 2 ಕೊರಿಂಥ 10:12ರಲ್ಲಿ ಕಂಡುಬರುತ್ತದೆ. ಈ ಶಬ್ಧಕ್ಕೆ ಮೂರು ಸಂಭವನೀಯ ಅರ್ಥಗಳಿವೆ: "ಒಟ್ಟುಗೂಡಿಸು" "ಹೋಲಿಸು" ಮತ್ತು "ಅರ್ಥೈಸು."[6] 2 ಕೊರಿಂಥ 10:12ರಲ್ಲಿ "ಒಟ್ಟುಗೂಡಿಸು" ಎಂಬ ಅನುವಾದ ಅವಶ್ಯಕತೆಯನ್ನು ಹೊಂದಿದೆ ಆದರೆ ಅದರ ಅರ್ಥ 2:13c ದಲ್ಲಿ ಗಣನೀಯವಾದ ಮಟ್ಟದಲ್ಲಿ ಎರಡೂ ಆತ್ಮೀಕ ಸಂದರ್ಭಗಳ ಲಿಂಗವನ್ನು ಅವಲಂಬಿಸಿದೆ. ಒಂದು ಉದಾಹರಣೆಯಲ್ಲಿ ಕ್ರಿಯಾ ವಿಶೇಷಣ (πνευματικὰ, *pneumatika*) ಸ್ಪಷ್ಟವಾಗಿ ನಪುಂಸಕವಾಗಿದೆ, ಅದರ ಅರ್ಥ **ಆತ್ಮೀಕ ಸಂಗತಿಗಳು**. ಇನ್ನೊಂದು (πνευματικοῖς, *pneumatikois*) ಗ್ರೀಕ್ ನಲ್ಲಿ ಸಮಪ್ರದಾನ ಸೂಚಕ ಬಹುವಚನವಾಗಿದೆ. ಅದೇ ವಿಧವು ನಪುಂಸಕ ಮತ್ತು ಪುಲಿಂಗ ಎರಡರಲ್ಲೂ ಉಪಯೋಗಿಸಲಾಗಿದೆ. ಒಂದುವೇಳೆ ಅದನ್ನು ಪುಲಿಂಗದಲ್ಲಿ ತಿಳಿದುಕೊಳ್ಳುವದಾದರೆ, ಅದು "ಆತ್ಮೀಕ ಮನುಷ್ಯನನ್ನು" ಅಥವಾ "ಆತ್ಮೀಕ ಪದಗಳನ್ನು" ಉಲ್ಲೇಖಿಸುತ್ತದೆ. ಒಂದುವೇಳೆ ಅದನ್ನು ನಪುಂಸಕ ಲಿಂಗದಲ್ಲಿ ಓದುವದಾದರೆ, ಅದು ಆತ್ಮೀಕ ಆಲೋಚನೆಗಳನ್ನು ಉಲ್ಲೇಖಿಸುತ್ತದೆ. NRSV *sunkrinō* ಎಂದು ತೆಗೆದುಕೊಳ್ಳುತ್ತದೆ "ಅರ್ಥೈಸು" ಮತ್ತು ಕ್ರಿಯಾವಿಶೇಷಣ "ಆತ್ಮೀಕ" ಎಂದು ಅರ್ಥನೀಡಲು ಪುಲಿಂಗವಾಗಿ ತೆಗೆದುಕೊಳ್ಳುತ್ತದೆ, ಆದುದರಿಂದ 2:13c ದಲ್ಲಿ ಅದರ ಅನುವಾದ ". . . ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇನೆ."[7]

NASB ಮತ್ತು ಎರಡೂ NIV ಗಿಂತ ಬೇರೆ ಆಗಿವೆ, ". . . ಆತ್ಮೀಕ ವಿಚಾರಗಳನ್ನು ಆತ್ಮೀಕ ಪದಗಳೊಂದಿಗೆ ಒಟ್ಟುಗೂಡಿಸುತ್ತಾ" (NASB) ಮತ್ತು "ಆತ್ಮೀಕ ನೈಜ್ಯತೆಗಳನ್ನು ಆತ್ಮನು-ಬೋಧಿಸದ ಪದಗಳೊಂದಿಗೆ [NIV] ವಿವರಿಸುತ್ತದೆ." ಅವರು ಆಲೋಚನೆಯಲ್ಲಿ ಒಂದಕ್ಕೊಂದು ಒಂದೇ ರೀತಿಯಲ್ಲಿವೆ, ಪ್ರಶ್ನಿಸಬಹುದಾಂದತ "ಆತ್ಮೀಕ" ಸಂದರ್ಭಗಳನ್ನು ತಿಳಿದುಕೊಳ್ಳುತ್ತದೆ ಆದರೆ ಅದನ್ನು "ಪದಗಳಲ್ಲಿ" ಅಳವಡಿಸಿಕೊಳ್ಳಲು ಶಬ್ದಶಃ ಅನುವಾದಿಸುತ್ತದೆ. ಅನುವಾದವಾಗಲಿ ಪೌಲನ ಬೋಧನೆಗೆ ಧಕ್ಕೆತರದಂತೆ ಕಾಪಾಡಿಕೊಳ್ಳಬೇಕು; ಆದರೆ ಪೌಲನು ತನ್ನ ಓದುಗರು ಆತ್ಮನ ಮೂಲಕ ದೇವರ ಪ್ರಕಟನೆಯನ್ನು ಅವಲಂಬಿಸಿರುವದರ ಕುರಿತು ಕಳಕಳಿಹೊಂದಿರುವದರಿಂದ, NRSV ಅನುವಾದವು, "ಆತ್ಮೀಕವಾದವರು," ಎಂದು ವ್ಯಕ್ತಿಗಳನ್ನು ಉಲ್ಲೇಖಿಸಿರುವದು,

ಯೋಗ್ಯವಾಗಿದೆ.

## ಪ್ರಾಕೃತಿಕ ಮನುಷ್ಯ ಮತ್ತು ಆತ್ಮೀಕ ಮನುಷ್ಯ (2:14-16)

ಯೇಸು ಕ್ರಿಸ್ತನ ಮೇಲಂಗಿಯನ್ನು ಹೊದ್ದುಕೊಳ್ಳುವದೆಂದರೆ ಮಿಶನರಿಯಾಗುವದು. ಒಬ್ಬನು ತನ್ನ ನಂಬಿಕೆಯನ್ನು ಯೇಸುವಿನ ಮೇಲೆ ಹಾಕುವದು, ಆತನನ್ನು ಪೂರ್ಣ ಹೃದಯ ಮತ್ತು ಪ್ರಾಣದಿಂದ ಪ್ರೀತಿಸುವದು, ವಿಶ್ವಾಸಿಗಳು ಯಾರನ್ನು ಪ್ರೀತಿಸುತ್ತಾರೋ ಅವರಿಗೆ ತಾವು ಕಂಡುಕೊಂಡಿರುವದನ್ನು ಹೇಳುವದಾಗಿದೆ. ಕ್ರೈಸ್ತರು ಭಿನ್ನಾಭಿಪ್ರಾಯಗಳನ್ನು ಎದುರಿಸುವಾಗ ಗಲಿಬಿಲಿಗೆ ಒಳಗಾಗುತ್ತಾರೆ, ಅಥವಾ ಇನ್ನೂ ಕೆಟ್ಟ ಪರಿಸ್ಥಿತಿ, ಲೋಕದ ಹಗೆತನ. ಪ್ರತಿಯೊಬ್ಬರು ಏಕೆ ನೋಡಲಾಗುವದಿಲ್ಲ? ಪೌಲನು ಈ ಪ್ರಶ್ನೆಯನ್ನು 2:14-16ರಲ್ಲಿ ಸಂಬೋಧಿಸುತ್ತಾನೆ.

**14ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. 15ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ. 16ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

**ವಚನ 14**. **ಪ್ರಾಕೃತ ಮನುಷ್ಯನು** ಎಂಬ ಅನುವಾದ ಒಂದು ಭಾಷೆಯ ಗಾದೆಮಾತನ್ನು ತೆಗೆದುಕೊಂಡು ಇನ್ನೊಂದು ಭಾಷೆಗೆ ಸ್ಥಳಾಂತರಿಸುವದು ಎಷ್ಟು ಕಠಿಣ ಎಂಬುದನ್ನು ಸಾಕ್ಷೀಕರಿಸುತ್ತದೆ. ಇಂಗ್ಲೀಷನಲ್ಲಿ (ψυχικός, *psuchikos*), ಇದಕ್ಕೆ ಸಮಾನಾರ್ಥಕವಿಲ್ಲ, "ಪ್ರಾಕೃತ ಮನುಷ್ಯ" ಎಂದಿದ್ದಾಗ್ಯೂ ಅದು ಕನಿಷ್ಠಪಕ್ಷ "ಆತ್ಮೀಕರಾದವರಿಗೆ ಆತ್ಮೀಕ ಸತ್ಯಗಳನ್ನು ಅರ್ಥೈಸುವದು." ಒಳಗೊಂಡಿದೆ. ಸರಿಯಾದ ಶ್ರೇಣಿಯೊಳಗೆ ಇದೆ. ಪೌಲನ ಮನಸ್ಸಿನಲ್ಲಿ ಮೇಲಿನ ತೋರಿಕೆಯ ಮಟ್ಟದಲ್ಲಿ ಜೀವಿಸುವ ಮನುಷ್ಯನಿದ್ದಾನೆ, ಸ್ವಾಭಾವಿಕ ಆಕಾಂಕ್ಷೆ ಹಿಡಿತದಲ್ಲಿವೆ. ಸ್ವಾಭಾವಿಕ ಮನುಷ್ಯನು ಉಣ್ಣುತ್ತಾನೆ, ಮಲಗುತ್ತಾನೆ, ಸುಖವನ್ನು ಹುಡುಕುತ್ತಾನೆ ಮತ್ತು ಸೌಲಭ್ಯಗಳಿಗಾಗಿ ಹೋರಾಡುತ್ತಾನೆ, ತನ್ನ ಕುರಿತಾಗಿ ಸ್ವಲ್ಪ ಪ್ರೀತಿಯನ್ನು, ನೈತಿಕತೆ ಮತ್ತು ತನ್ನ ಅಸಿತ್ವಕ್ಕೆ ಕಾರಣವನ್ನು ಹುಡುಕುತ್ತಾನೆ. ವಿಶ್ವದ ಅಥವಾ ಮಾನವಕುಲದ ಸ್ವರೂಪದ ಕುರಿತು ಯಾವುದೇ ಅಭಿಪ್ರಾಯವಿರಲಿ ಅವು ತನ್ನ ಸ್ವಂತ ಪರ್ಯಾಲೋಚನೆಯಿಂದಾಗಿ ಒಂದಾಗುತ್ತವೆ. ತನ್ನ ಹೆಚ್ಚು ಅಭಿವೃದ್ಧಿ ಹೊಂದಿದ ವಿಧದಲ್ಲಿ, ಪರ್ಯಾಲೋಚನೆಯು ನಕಲುಮಾಡುವ "ತತ್ವಜ್ಞಾನ" ವಾಗಿದೆ. ಸ್ವಾಭಾವಿಕ ಮನುಷ್ಯನು ಅಜ್ಞಾನದಲ್ಲಿ ಜೀವಿಸಬಹುದು ಅಥವಾ ಅವನು ಸುಕ್ಷಿತ ತತ್ವಜ್ಞಾನಿಯಾಗಿರಬಹುದು. ಇಂಥಹ ಜನರಿಗೆ ದೇವರು ತನ್ನನ್ನು ತಾನು ಪ್ರಕಟಿಸಿರುವದು ಜೀವಿತದಲ್ಲಿ ಅಸಮಂಜಸವಾಗಿದೆ. ಆದುದರಿಂದ, ಅವರು ದೇವರ ಮಾತುಗಳನ್ನು ಹುಚ್ಚುತನವೆಂದು ತೆಗೆದುಹಾಕುತ್ತಾರೆ. ಇದಕ್ಕೆ ವ್ಯತ್ಯಾಸವಾಗಿ ದೇವರು, ಸ್ವ-ಸೇವೆಯ ಆನಂದ ಮತ್ತು ಸ್ವ-ಕೇಂದ್ರಿಕೃತ ಪರ್ಯಾಲೋಚನೆಯನ್ನು ಹುಚ್ಚುತನವೆನ್ನುತ್ತಾನೆ (3:19).

ಪ್ರಾಕೃತ ಮನುಷ್ಯ ಮತ್ತು ಆತ್ಮೀಕ ಮನುಷ್ಯನ ಮಧ್ಯದಲ್ಲಿ, ಹಂಚಿಕೆಯಾದ ಸ್ವಲ್ಪ

ಸ್ಥಳವಿರುತ್ತದೆ. ಎರಡೂ ಬೇರೆ ಬೇರೆ ದಿಕ್ಕಿನಲ್ಲಿ ಚಲಿಸುತ್ತವೆ. ಅಪ್ಪಟ ಪ್ರಾಕೃತ ಮನುಷ್ಯನು **ದೇವರ ಆತ್ಮನ ಸಂಗತಿಗಳನ್ನು ಸ್ವೀಕರಿಸುವದಿಲ್ಲ**. ಇದು ಅವನ ಉದಾಸೀನತೆ ಅಥವಾ ಕ್ರೂಜೆಯ ಸಂದೇಶಕ್ಕೆ ಆತನ ಹಗೆತನ ಎಂದು ಎಣಿಸಲ್ಪಡುತ್ತದೆ. ಆತ್ಮೀಕ ಸಂಗತಿಗಳು **ಆತನಿಗೆ ಹುಚ್ಚುತನವಾಗಿರುತ್ತವೆ; ಮತ್ತು ಅವನು ಅವುಗಳನ್ನು ತಿಳಿದುಕೊಳ್ಳುವದಿಲ್ಲ**. ಅವನ ಶಾರೀರಿಕ ಜ್ಞಾನವನ್ನು ಅವಲಂಬಿಸಿ, ಅವನು ಮಾಡುವ ಕೆಲಸಗಳಲ್ಲಿ ಪ್ರಾಕೃತ ಮನುಷ್ಯನು ಸಂಪನ್ಮೂಲಗಳ ಕೊರತೆಯನ್ನು ಮೌಲ್ಯಮಾಪನ ಮಾಡಲು ಮತ್ತು ದೇವರ ಪ್ರಕಟನೆಯನ್ನು ಮೆಚ್ಚಿಕೊಳ್ಳುವ ಕೊರತೆಯನ್ನು ಅನುಭವಿಸುತ್ತಾನೆ. “ದೇವರ ಆತ್ಮನು” ಪ್ರಕಟಿಸುವ **ಸಂಗತಿಗಳನ್ನು ಆತ್ಮೀಕವಾಗಿ** ಪರಿಗಣಿಸಬೇಕು.

ಪೌಲನು ಕೊರಿಂಥದ ವಿಶ್ವಾಸಿಗಳಿಗೆ ಭರವಸೆ ನೀಡುತ್ತಾನೆ ಏನಂದರೆ, ಅವರು ತಮ್ಮನ್ನು ತಾವು ಆತ್ಮನಿಂದ ಬೋಧಿಸುವದಕ್ಕೆ ಅನುಮತಿಸುವಾಗ, ಅವರು ದೈವೀಕ ಜ್ಞಾನದಲ್ಲಿ ಪಾಲು ತೆಗೆದುಕೊಳ್ಳುವವರಾಗಿದ್ದಾರೆ. ಇಂಥಹ ಗ್ರಹಿಕೆ ಕೇವಲ ಆಂತರ್ಯದಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಒಬ್ಬ ಕ್ರೈಸ್ತನು ಒಬ್ಬ ಅವಿಶ್ವಾಸಿಗೆ, ಸಂಪೂರ್ಣ ಒಳ್ಳೇತನ, ನಿರೀಕ್ಷೆ ಮತ್ತು ಕ್ರಿಸ್ತನಲ್ಲಿ ಇರುವಂಥಹ ಅನ್ಯೋನ್ಯತೆಯನ್ನು ನಿವೇದಿಸಲು ಸಾಧ್ಯವಿಲ್ಲ. ಇಂಥಹ ಜ್ಞಾನವು ಕೇವಲ ಆತನಲ್ಲಿ ಜೀವಿಸುವದರಿಂದ ಮಾತ್ರ ದೊರೆಯುತ್ತದೆ. ಒಬ್ಬನು ತನ್ನನ್ನು ತಾನು ದೇವರ ಎದುರಿನಲ್ಲಿ ತೆರೆದಿಡಬೇಕು ಆಗ ಆತನು ದೇವರ ಆತ್ಮನನ್ನು ಸ್ವೀಕರಿಸಲು ಸಾಧ್ಯ.

Robert H. Stein ಒಬ್ಬ ಅವಿಶ್ವಾಸಿ ತನಗೆ ಸಂಗತಿಗಳ ಸ್ಪಷ್ಟವಾದ ತಿಳುವಳಿಕೆ ಇದ್ದಾಗಲೂ ಸತ್ಯವೇದದ ಸತ್ಯಗಳ ವಯಕ್ತಿಕ ವಿಶಿಷ್ಟತೆಯನ್ನು ತಿರಸ್ಕರಿಸಬಹುದು.[8] ಅವಿಶ್ವಾಸಿ ಸತ್ಯವೇದದ ಬೋಧನೆಯನ್ನು “ಹುಚ್ಚುತನ” ಎಂದು ತಿರಸ್ಕರಿಸುವಾಗ, ಅವನು ಇತಿಹಾಸದಲ್ಲಿ ದೇವರು ಕ್ರಿಸ್ತನ ವ್ಯಕ್ತಿತ್ವದಲ್ಲಿ ಕ್ರಿಯಾಶೀಲನಾಗಿದ್ದನು ಎಂಬ ಕ್ರೈಸ್ತ ಸಾಕ್ಷಿಯಲ್ಲಿ ನಂಬಿಕೆ ಇಡುವದಿಲ್ಲ ಎಂದು ದೃಢಪಡಿಸುತ್ತಾನೆ. ಅವನು ಸತ್ಯವೇದ ಆಧಾರಿತ ದಾಖಲೆಗಳ ಐತಿಹಾಸಿಕ ಹಿನ್ನೆಲೆಯನ್ನು ತಿಳಿದಿರಬಹುದು. “ಆತ್ಮೀಕ” ಪುನರುಜ್ಜೀವನಗೊಳಿಸುವವರು, ಅವರು ಆತ್ಮೀಕವಾಗಿ ಮತ್ತು ಪೌಲನ ಖಂಡಿತವಾದ ಮಾತುಗಳ ಅರ್ಥವನ್ನು ಗ್ರಹಿಸಿರಬಹುದು. ಅವನು ತಾನು ಆಲಿಸಿರುವದು ಹುಚ್ಚುತನ ಎಂದು ಯಾವಾಗ ಪರಿಗಣಿಸುತ್ತಾನೋ, ಅವನು ಭೌದ್ಧಿಕ ಮಟ್ಟದಲ್ಲಿ ತಿಳಿದುಕೊಳ್ಳಲು ಅಸಮರ್ಥನಾಗಿದ್ದಾನೆ ಎಂಬ ಸೂಚನೆಗಳಿಲ್ಲ. ಬದಲಾಗಿ, ಆತನು ತನ್ನಷ್ಟಕ್ಕೆ ಸುವಾರ್ತೆಯ ವಿಶಿಷ್ಟತೆಯನ್ನು ತಿರಸ್ಕರಿಸುತ್ತಾನೆ.

ಈ ವೇದಭಾಗದಲ್ಲಿ ಗುರುತಿಸಲಾದ ಮೂರು ವರ್ಗದ ಜನರನ್ನು ಗುರುತಿಸುವದು ಗೊಂದಲಮಯವಾಗಿದೆ. ಕೆಲವರು ಅವರನ್ನು ವ್ಯವಸ್ಥಿತವಾದ ವರ್ಗದಲ್ಲಿ ವಿಭಾಗಿಸಲು ಬಯಸುತ್ತಾರೆ (1) “ಆತ್ಮೀಕರು” (πνευματικοί, *pneumatikoi*) ಅವರು ಪುನರುಜ್ಜೀವನಗೊಳಿಸುವವರು ಪ್ರಬುದ್ಧರಾಗಿರುತ್ತಾರೆ ಮತ್ತು ಪೌಲನಿಗೆ ಬೆಂಬಲವಾಗಿರುತ್ತಾರೆ. (2) “ಶರೀರಾಧೀನಸ್ವಭಾವದವರು” (σαρκικοί, *sarkikoi*) ಅವರು ಪುನರುಜ್ಜೀವನಗೊಳಿಸುವವರಲ್ಲ (3:3). (3) “ಪ್ರಾಕೃತ” (ψυχικοί, *psuchikoi*) ಮನುಷ್ಯರು ಅವರು ಅಪ್ರಭುದ್ಧರು. ಪೌಲನು ಇದೇ ಜನರನ್ನು ಇಬ್ಬರನ್ನೂ *sarkikoi* ಮತ್ತು *psuchikoi* ಇಬ್ಬರನ್ನೂ ಎಂದು ಸೂಚಿಸಿದ್ದಾನೆ ಎಂಬುದನ್ನು ಗ್ರಹಿಸಿಕೊಂಡಾಗ

ಪದಜ್ಞಾನವು ಮುರಿದುಬೀಳುತ್ತದೆ. ಪೌಲನ ವಿಷಯ 3:3ರಲ್ಲಿ ವಿಗ್ರಹಾರಾಧಕರಲ್ಲಿ ಕೊರಿಂಥದಲ್ಲಿರುವ ಕ್ರೈಸ್ತರಾಗಿದ್ದಾರೆ. ನಂತರದ ಎರಡು ಗುಂಪುಗಳು ಅದೇ ಜನರೆಂದು ಉತ್ತಮವಾಗಿ ದೃಷ್ಟಿಸುವದನ್ನು ಎರಡು ಬೇರೆಬೇರೆ ಅಂಶಗಳಿಂದ ಪರಿಗಣಿಸಬಹುದು. ಎರಡೂ ಶರೀರಾಧೀನಸ್ವಭಾವದ ಆಶೆಗಳನ್ನು ತೃಪ್ತಿಪಡಿಸುತ್ತವೆ ಮತ್ತು ಅವು ಅವರನ್ನು ಉನ್ನತವಾದ ಜೀವಿತಕ್ಕೆ ನಡೆಸುವ ದೇವರ ಕರೆಯುವಿಕೆಗೆ ಉದಾಸೀನವಾಗಿರುತ್ತವೆ.

ಪೌಲನು ಹೇಳುವಂತೆ ಎಲ್ಲಾ ವೈಭವ, ಸಂಪತ್ತು ತತ್ವಶಾಸ್ತ್ರದ ಜ್ಞಾನ, ಲೋಕದ ಮಹಿಮೆ ಇವೆಲ್ಲವೂ ದೇವರಿಂದ ಒಟ್ಟಾರೆ ತಿರಸ್ಕರಿಸಲ್ಪಡುತ್ತೇವೆ. ದೇವರು ಲೋಕದ ಬಲಹೀನ ಅಂಶಗಳನ್ನು ತನ್ನ ಬಲವನ್ನು ತಿಳಿಯಪಡಿಸುವದಕ್ಕೆ ಉಪಯೋಗಿಸುತ್ತೇನೆ (1:27).

**ವಚನ 15.** ತಾನು **ಆತ್ಮೀಕ** ಮತ್ತು ಇತರರನ್ನು ಪ್ರಾಕೃತ ಎಂದು ಕರೆಯುವ ಕೆಲವು ಜನರ ಮಧ್ಯದಲ್ಲಿ ಪೌಲನು ವ್ಯತ್ಯಾಸತೋರಿಸುತ್ತಾನೆ (2:14) ಎಂಬುದು ಸ್ಪಷ್ಟವಾಗಿದೆ ಆದರೆ ಅವನು ಒಬ್ಬನು ಒಂದು ವಿಧದಿಂದ ಇನ್ನೊಂದು ವಿಧಕ್ಕೆ ಹೇಗೆ ಚಲಿಸುತ್ತಾನೆ ಎಂಬುದನ್ನು ವರ್ಣಿಸಿಲ್ಲ (ಕನಿಷ್ಠ ಈ ಸನ್ನಿವೇಶದಲ್ಲಿ ಅಲ್ಲ). ಇಂಥಹ ವೇದಭಾಗವು ಇರಲು ಸಾಧ್ಯವೇ? ಒಬ್ಬ ವ್ಯಕ್ತಿ ಹುಟ್ಟಿದಾರಭ್ಯದಿಂದ ಈ ಗುಂಪಿನಲ್ಲಿ ಅಥವಾ ಇನ್ನೊಂದು ವಿಧದಲ್ಲಿ ಇರಲು ಸಾಧ್ಯವೇ? ಒಬ್ಬ ಮನುಷ್ಯನು ಜೀವಿತದ ಒಂದು ಹಂತದಲ್ಲಿ ಪ್ರಾಕೃತನಾಗಿ ಇನ್ನೊಂದು ಹಂತದಲ್ಲಿ ಆತ್ಮೀಕನಾಗಿ ಇರಲು ಸಾಧ್ಯವೇ? ಜನರಿಗೆ ನಿಜವಾದ ಆಯ್ಕೆ ಇದೆಯೋ? ಅವರ ನಿರ್ಧಾರಗಳು ಅವರು ತೆಗೆದುಕೊಳ್ಳುವ ನಿರ್ಧಾರ ಅವರು ಪ್ರಾಕೃತರಾಗಿ ಅಥವಾ ಆತ್ಮೀಕರಾಗಿ ಇರುವದರೊಂದಿಗೆ ಏನಾದರೂ ಸಂಬಂಧಹೊಂದಿಯೋ? ಪೌಲನು ಈ ಪತ್ರವನ್ನು ಬರೆಯುವದರಿಂದ ಪ್ರಾಕೃತ ಮನುಷ್ಯನ ಜೀವಿತದ ವಿಧಾನವನ್ನು ಪಶ್ಚಾತ್ತಾಪಡಲು ಮತ್ತು ಆತ್ಮೀಕನಾಗಲೂ ಅಯ್ಕೆಮಾಡಿಕೊಂಡಿರುವವರಿಗೆ ಸವಾಲನ್ನು ನೀಡುತ್ತಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಪೌಲನು ಕೊರಿಂಥದಲ್ಲಿ ಸುವಾರ್ತೆಯನ್ನು ಸಾರಿದನು, ಅವನು ಪಟ್ಟಣದಲ್ಲಿ ಸಭೆಯೊಂದಿಗೆ ಸಂಪರ್ಕದಲ್ಲಿದ್ದನು, ಅವನು ವಾದಿಸುವದನ್ನು ಮತ್ತು ಎಚ್ಚರಿಸುವದನ್ನು ಮುಂದುವರೆಸಿದನು - ಇವೆಲ್ಲವುಗಳು ಬದಲಾವಣೆಯ ಸಾಧ್ಯತೆಯಲ್ಲಿ ನಂಬಿಕೆಯನ್ನಿಟ್ಟಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿವೆ. ಅವನು ಯಾವ ದೈವಯೋಗದ ದೃಷ್ಟಿಕೋನವನ್ನು ತೆಗೆದುಕೊಳ್ಳಲಿಲ್ಲ. ಯಾರೊಬ್ಬರು ಮರಳಿಪಡೆಯಲಾಗದ ಪ್ರಾಕೃತ ಮನುಷ್ಯರಾಗುವದಿಲ್ಲ ಮತ್ತು ಯಾರೊಬ್ಬರೂ ವಿರ್ಪಯಸ್ತಗೊಳಿಸಲು ಅಶಕ್ಯವಾದ ಆತ್ಮೀಕರಾಗುವದಿಲ್ಲ. ಪೌಲನು ತನ್ನ ಓದುಗರು, ಆಯ್ಕೆ ಮಾಡಿಕೊಳ್ಳಲು, ಬದಲಾವಣೆ ಹೊಂದಲು ಮತ್ತು ಬೆಳೆಯಲು ಸುವಾರ್ತೆಯ ಬೇಡಿಕೆಗಳನ್ನು ಆಲಿಸಬೇಕು ಇದರಿಂದಾಗಿ ಅವರು ಆತ್ಮೀಕ ಜನರಾಗಬಹುದು.

ಒಬ್ಬನು ತನ್ನ ಚಿತ್ತವನ್ನು ಕಾರ್ಯರೂಪದಲ್ಲಿ ತರುವಾಗ ಮತ್ತು ಸುವಾರ್ತೆಗೆ ವಿಧೇಯನಾಗುವಾಗ, ಪರಿಣಾಮ ದೇವರ ಆತ್ಮನು ಅವರಲ್ಲಿ ನೆಲೆಸುತ್ತಾನೆ ಮತ್ತು ಅವನನ್ನು ಬಲಪಡಿಸುತ್ತಾನೆ. ಆತ್ಮನ್ನು ತನ್ನ ಸಂಗಾತಿಯಾಗಿಟ್ಟುಕೊಂಡ, ಆತ್ಮೀಕ ಮನುಷ್ಯನು ದೇವರು ಗೌರವಿಸುವ ಯಾವುದು ಮತ್ತು ಪಾಪದ ಭಾರವನ್ನು ತೆರೆಯುವದು ಯಾವುದು ಮತ್ತು ಯಾವುದು ನಮ್ಮನ್ನು ಶಕ್ತಿಗುಂದಿಸುತ್ತದೆ ಮತ್ತು ನಾಶಮಾಡುತ್ತದೆ

ಎಂಬುದರ ಮಧ್ಯದಲ್ಲಿ ವ್ಯತ್ಯಾಸವನ್ನು ಗುರಿತಿಸಲು ಸಮರ್ಥನಾಗುತ್ತಾನೆ. **ಆತ್ಮೀಕನಾಗಿರುವವನು ಎಲ್ಲಾ ಸಂಗತಿಗಳ ಬೆಲೆಯನ್ನು ನಿಶ್ಚಯಿಸುತ್ತಾನೆ.** "ಎಲ್ಲಾ ಸಂಗತಿಗಳ" ಬೆಲೆಯನ್ನು ನಿಶ್ಚಯಿಸಿದ ಮೇಲೆ ಅವನು ಉತ್ತಮವಾದ ಮತ್ತು ದೈವೀಕ ವಿಧಾನವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಎಂಬುದನ್ನು ಸೂಚಿಸುತ್ತದೆ. ಪ್ರಾಕೃತ ಮನುಷ್ಯನು, ತನ್ನ ಆಯ್ಕೆಯನ್ನು ಮಾಡಿದ ಮೇಲೆ ವಿಶ್ವಾಸಿಯ ನಂಬಿಕೆ, ಸಂತೋಷ ಅಥವಾ ನೀರಿಕ್ಷೆಯನ್ನು ತಿಳಿದುಕೊಳ್ಳುವದಿಲ್ಲ. ಅದೇ ಪ್ರಕಾರ ಕ್ರೈಸ್ತನು **ಯಾರಿಂದಲೂ ಬೆಲೆಯನ್ನು ನಿಶ್ಚಿಯಿಸಿಕೊಳ್ಳುವದಿಲ್ಲ**.

**ವಚನ 16.** "ಇದು ಬರೆಯಲ್ಪಟ್ಟಿದೆ" ಎಂಬ ಪ್ರಸ್ತಾಪನೆಯ ವಾಕ್ಯವಿಲ್ಲದೆ (ಭೇದತೋರಿಸುವ 2:9), ಪೌಲನು ಯೆಶಾಯ 40:13ರನ್ನು ಉಲ್ಲೇಖಿಸುತ್ತಾನೆ. 2:16ರರಲ್ಲಿರುವ ಪ್ರಶ್ನೆಗಳು ಅಲಂಕಾರಿಕವಾಗಿವೆ. **ಕರ್ತನ ಮನಸ್ಸನ್ನು ತಿಳಿದುಕೊಂಡು ಅವನಿಗೆ ಉಪದೇಶಿಸುವನಾರು?** ನಿಜವಾಗಿಯೂ, ಯಾರೊಬ್ಬರೂ "ಕರ್ತನ ಮನಸ್ಸನ್ನು ಅರಿತಿಲ್ಲ." ಇಂಥಹ ಪ್ರಶ್ನೆಗಳಿಗೆ ಉತ್ತರ ವಾದವಿವಾದವನ್ನು ಅನುಮತಿಸುವದಿಲ್ಲ. ಅಪೊಸ್ತಲನು ಇದು ಪ್ರಾಕೃತ ಮನುಷ್ಯನಿಗೆ ತನ್ನ ಪ್ರಾಕೃತ ಜ್ಞಾನದೊಂದಿಗೆ ಇದು ಅಸಾಧ್ಯ, ಆತ್ಮೀಕ ಮನುಷ್ಯನ ಮನಸ್ಸು, ಹೃದಯ ಮತ್ತು ಆತ್ಮವನ್ನು ಹುಡುಕುವದು, ಯಾವುದೇ ಮನುಷ್ಯ ಜೀವಿಗೆ ದೇವರ ಸಲಹೆಗಾರನ ಮನಸ್ಸನ್ನು ಸಂಶೋಧಿಸಿದಂತೆ. ಕ್ರೈಸ್ತರು "ಕ್ರಿಸ್ತನ ಮನಸ್ಸನ್ನು" ಹಂಚಿಕೊಂಡಿದ್ದಾರೆ, ಅಲ್ಲಿ ದೇವರು ತನ್ನನ್ನು ತಾನು ಪ್ರಕಟಿಸಲು ಆಯ್ಕೆಮಾಡಿಕೊಂಡಿದ್ದಾನೆ. ಪ್ರಾಕೃತ ಮನುಷ್ಯನು ಆತ್ಮೀಕವಾಗಿ ಗ್ರಹಿಸಿರುವವರ ಮನಸ್ಸನ್ನು ತಿಳಿದುಕೊಳ್ಳಲು ಸಮೀಪಸ್ಥರಾಗಬಹುದು, ದೇವರ ಮನಸ್ಸನ್ನು ತಿಳಿದುಕೊಳ್ಳಲು ಸಮೀಪಸ್ಥರಾದಂತೆ.

ಯೆಶಾಯನ ಉಲ್ಲೇಖವನ್ನು ಅನುಸರಿಸಿ, ಪೌಲನು ದೃಢಪಡಿಸುತ್ತಾನೆ, **ಆದರೆ ನಾವು ಕ್ರಿಸ್ತನ ಮನಸ್ಸನ್ನು ಹೊಂದಿದ್ದೇವೆ.** ಇದು ಧೈರ್ಯದ ಹೇಳಿಕೆಯಾಗಿದೆ. ಪ್ರಥಮ ಪುರುಷ ಬಹುವಚನ "ನಾವು" ಉಪಯೋಗಿಸುವದರ ಮೂಲಕ, ಅಪೊಸ್ತಲನು ತನ್ನನ್ನು ಕೊರಿಂಥದವರೊಂದಿಗೆ ತಾನೂ ಸಾಮಾನ್ಯ ಆತ್ಮೀಕ ನೈಜ್ಯತೆಯಲ್ಲಿ ಪಾಲನ್ನು ಹೊಂದಿದ್ದೇನೆಂದು ತಿಳಿದುಕೊಂಡಿದ್ದೇನೆ ಎಂಬುದನ್ನು ಪ್ರದರ್ಶಿಸುತ್ತಾನೆ. "ಕ್ರಿಸ್ತನ ಮನಸ್ಸನ್ನು" ಹೊಂದಿಕೊಳ್ಳಲು ಪಾಪಗಳಿಗಾಗಿ ಪಶ್ಚಾತ್ತಾಪಪಡಬೇಕು, ಕ್ರೂಜೆಯ ಬುಡದಲ್ಲಿ ತನ್ನ ಕಲೆಗಳನ್ನು ತೊಳೆದುಕೊಳ್ಳಬೇಕು, ಆಡಂಬರ ಮತ್ತು ಆತ್ಮ ವಿಶ್ವಾಸವನ್ನು ತೊರೆದುಬಿಡಬೇಕು. ಅಭಿಪ್ರಾಯ ಮತ್ತು ಆದ್ಯತೆನೀಡಿರುವ ಬೋಧಕರ ಪಂಗಡಗಳ ವಿಷಯದಲ್ಲಿ ಜಗಳವಾಡುವವರು, ಕ್ರಿಸ್ತನ ಮನಸ್ಸನ್ನು ಎಂದಿಗೂ ಹೊಂದಿ ಕೊಂಡಿರುವದಿಲ್ಲ. ಕೊರಿಂಥದವರು ಅವರನ್ನು ಬಾಧಿಸುತ್ತಿರುವ ಹಿಂದಿನ ಸಮಸ್ಯೆಗಳನ್ನು ತೆಗೆದುಕೊಂಡರೆ, ಪ್ರಾರಂಭದ ಅಂಶ ವಯಕ್ತಿಕ ಹೆಮ್ಮೆಯನ್ನು ಬದಿಗಿಟ್ಟು ಮಾರ್ಗ ದರ್ಶನಕ್ಕಾಗಿ ಕರ್ತನನ್ನು ಎದುರು ನೋಡುತ್ತಾ ಸಿದ್ಧರಾಗಿರುವದಾಗಿದೆ ಪತ್ರದ ಗಣನೀಯವಾದ ಭಾಗ ಸಭೆಯಲ್ಲಿ ಸೋರಿಹೋಗುತ್ತಿರುವ ಪ್ರಶ್ನಿಸಬಹುದಾದ ನಂಬಿಕೆಗಳು ಮತ್ತು ಅಭ್ಯಾಸಗಳಿಂದಾಗಿ "ಕ್ರಿಸ್ತನ ಮನಸ್ಸನ್ನು" ಅಳವಡಿಸಿಕೊಳ್ಳುವದಕ್ಕೆ ಸಮರ್ಪಿಸಲಾಗಿದೆ.

# ಅನ್ವಯಿಕೆಗಳು

## ಸಂದೇಶ ಮತ್ತು ಸಂದೇಶವಾಹಕರು

ಅವರಿಗೆ ದೇವರು ನೀಡಿದ ವರಗಳಲ್ಲಿ ಕೆಲವು ಕ್ರೈಸ್ತರು ತಮ್ಮನ್ನು ತಾವು ಉತ್ತಮವಾಗಿ ವ್ಯಕ್ತಪಡಿಸುವದನ್ನು ಕಂಡುಕೊಂಡಿದ್ದಾರೆ; ಅವರು ಪರಿಣಾಮಕಾರಿಯಾದ ಭಾಷಣಕಾರರಾಗಿದ್ದಾರೆ, ಯಾಕಂದರೆ ಸುವಾರ್ತೆಯು ಹೆಚ್ಚಾದ ಸಮಯದಲ್ಲಿ, ಹೇಳಿದ ಸಂದೇಶವಾಗಿದೆ ಮತ್ತು ಬೋಧನೆ ಮತ್ತು ಎಚ್ಚರಿಕೆ ಕ್ರಿಸ್ತನಲ್ಲಿ ಪ್ರಭುದ್ಧತೆಯನ್ನು ತಲುಪಲು ಮೂಲವಾಗಿವೆ, ಕ್ರಿಸ್ತನ ಕುರಿತಾಗಿ ಮತ್ತು ಕ್ರೂಜೆಯ ಕುರಿತು ಸ್ಪಷ್ಟವಾಗಿ ಯಾರು ಸತ್ಯವನ್ನು ಮಾತನಾಡುತ್ತಾರೋ ಅವರ ಮೇಲೆ ಸಭೆ ಅವಲಂಬಿತವಾಗಿದೆ, ಅವರು ಕ್ರೈಸ್ತರನ್ನು ಪ್ರೇರೆಪಿಸಲು ಮತ್ತು ನಂಬಿಕೆಯಲ್ಲಿ ಪುರುಜ್ಜೀವನಗೊಳಿಸಲು ಶಕ್ತರಾಗಿದ್ದಾರೆ. ಪ್ರತಿಯೊಂದು ಯುಗದ ಸಭೆ ತನ್ನ ಬೋಧಕರು ಮತ್ತು ಪ್ರಸಂಗಿಗಳಿಂದ ಅಶೀರ್ವದಿಸಲ್ಪಟ್ಟಿದೆ. ವ್ಯತಿರಿಕ್ತವಾಗಿ, ಸಭೆ ಯಾವಾಗಲೂ ಯಾರು ತಮಗೆ ದೇವರು ನೀಡಿದ ಮಾತನಾಡುವ ವರವನ್ನು ತಮ್ಮ ಸ್ವಂತ ಉದ್ದೇಶಕ್ಕಾಗಿ ಉಪಯೋಗಿಸಲು ಸಿದ್ಧರಾಗಿದ್ದಾರೋ ಅವರಿಂದ ಶಾಪಗ್ರಸ್ತವಾಗಿದೆ.

ಕ್ರೈಸ್ತರು ಯಾರು ಉತ್ತಮವಾಗಿ ಮಾತನಾಡುತ್ತಾರೋ ಅವರನ್ನು ಮೆಚ್ಚಿಕೊಳ್ಳಬೇಕಾಗಿದೆ. ಯಾರು ಮಾತನಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾರೋ ಮತ್ತು ಅದನ್ನು ಸತ್ಯದ ಮುನ್ನಡೆಗಾಗಿ ಉಪಯೋಗಿಸುತ್ತಾರೋ ಅವರಿಗೆ ಗೌರವ ದೊರೆಯುತ್ತದೆ. ಕ್ರೈಸ್ತರು ವಿಮರ್ಶಾತ್ಮಕವಾಗಿ, ಗ್ರಹಿಕೆಯೊಂದಿಗೆ ಅಲಿಸುವದು ಅವಶ್ಯವಾಗಿದೆ. ಮೃದುವಾಗಿ ಮತ್ತು ಮನೋರಂಜನೆ ನೀಡುವ ಪ್ರಸಂಗಗಳು ಸತ್ಯವನ್ನು ತಿಳಿಸುವದಿಲ್ಲ. ಕ್ರಿಸ್ತನನ್ನು ಉತ್ತಮವಾಗಿ ಸೇವಿಸಬೇಕೆಂದರೆ, ದೇವರ ವಾಕ್ಯವನ್ನು ಬೋಧಿಸುವವರು ಮೊದಲು ತಿಳುವಳಿಕೆಯುಳ್ಳವಾಗಿರಬೇಕು. ಅವರು ಸತ್ಯವೇದವನ್ನು ತಿಳಿದುಕೊಳ್ಳಬೇಕು ಮತ್ತು ಮಾರ್ಗದರ್ಶನಕ್ಕಾಗಿ ಅದನ್ನು ಆತುಕೊಳ್ಳಬೇಕು. ಜ್ಞಾನ ಸಂಪಾದನೆ ಮತ್ತು ಪದಗಳನ್ನು ಉಪಯೋಗಿಸುವ ವಿಧಾನ ಮಾತ್ರ ಸಾಲದು. ಕ್ರೈಸ್ತ ಬೋಧಕ ಹೃದಯದಿಂದ ಮಾತನಾಡುವವನಾಗಿರಬೇಕು. ಪ್ರಾಮಾಣಿಕತೆ ಮತ್ತು ವಯಕ್ತಿಕ ಸಮರ್ಪಣೆಗೆ ಯಾವ ಬದಲಿ ವ್ಯವಸ್ಥೆಯನ್ನು ಮಾಡಲು ಸಾಧ್ಯವಿಲ್ಲ.

ಅದ್ಯಾಪಕರು ವಿದ್ಯಾರ್ಥಿಗಳು ಪ್ರಭಾವಿತರಾಗಿದ್ದಾರೆ ಎಂಬುದನ್ನು ಗುರುತಿಸುತ್ತಾರೆ ಮತ್ತು ಬೋಧಕರಿಂದ ಪ್ರೇರೆಪಿಸಲ್ಪಟ್ಟಿರುತ್ತಾರೋ ಅವರು ಅವರ ವಿಷಯದಲ್ಲಿ ಕೂತೂಹಲವುಳ್ಳವರಾಗಿರುತ್ತಾರೆ. ಕ್ರೈಸ್ತ ಬೋಧಕರು ಕೇವಲ ಸುವಾರ್ತೆಯ ಕುರಿತು ಕೂತೂಹಲವುಳ್ಳವರಾಗಿರುವದಿಲ್ಲ, ಆದರೆ ತಾವು ಅದರಂತೆ ಜೀವಿಸಲು ಸಮರ್ಪಿಸಿಕೊಳ್ಳಬೇಕು. ಅವನು ಪರಿಶುದ್ದನಾಗಿರಬೇಕು. ನಡತೆ ಮತ್ತು ಜ್ಞಾನ ಒಂದೇ ವ್ಯಕ್ತಿಯಲ್ಲಿ ಸೇರಿಕೊಳ್ಳುವಾಗ, ಅದು ಮಾತನಾಡುವ ಕೌಶಲ್ಯದೊಂದಿಗೆ ಜೋತೆಗೂಡುವಾಗ, ದೇವರ ರಾಜ್ಯವು ಆಶೀರ್ವಾದ ಹೊಂದುತ್ತದೆ. ಸತ್ಯವೇದದ ಶ್ರೇಷ್ಠ ಬೋಧಕರು ವಾಕ್ಚಾತುರ್ಯದ ಮೇಲೆ ಅವಲಂಬಿಸಲಿಲ್ಲ. ಅವರು ತಮ್ಮ ಶೋತೃಗಳನ್ನು ತಾವು ಹೇಳುವ ವಿಷಯಗಳ ಮೂಲಕ ಮಾತ್ರವಲ್ಲ, ತಾವು ಏನಾಗಿದ್ದೇವೆ ಎಂಬುದರ ಮೂಲಕ ಸಹ ಪ್ರೇರೆಪಿಸುತ್ತಿದ್ದರು. ಸತ್ಯವನ್ನು ಮಾತನಾಡುವವರ ಮಧ್ಯದಲ್ಲಿ ಆಯ್ಕೆಯನ್ನು

ಮಾಡಿಕೊಳ್ಳಬೇಕಾದಾಗ ಮತ್ತು ಯಾರು ತಮ್ಮ ಶ್ರೋತೃಗಳನ್ನು ಮಾತುಗಳ ಕೌಶಲ್ಯದ ಮೂಲಕ ಆಶ್ಚರ್ಯಚಕಿತರನ್ನಾಗಿಸುವವರು ಮತ್ತು ರಂಜಿಸುವವರು, ಸತ್ಯವನ್ನು ಆಯ್ಕೆ ಮಾಡಿಕೊಂಡಿರುವದರಿಂದ ಸಭೆಯು ಆಶೀರ್ವಾದಕ್ಕೆ ಪಾತ್ರವಾಗುತಿತ್ತು.

ಪೌಲನು ವಿಮರ್ಶಕರು ಅವನ ಹಂತದ ಸುಶಿಕ್ಷಿತರಲ್ಲಿ ಸಾಕ್ಷಿ ಸಮೇತ ತಪ್ಪುಗಳನ್ನು ಹುಡುಕುತ್ತಿದ್ದರು. ಇತರರು ಮಾತಿನ ಕೌಶಲ್ಯದಲ್ಲಿ ಮತ್ತು ತತ್ವಶಾಸ್ತ್ರದ ಗೂಢತೆಯಲ್ಲಿ ಆತನನ್ನು ಮೀರಿಸುತ್ತಿದ್ದರು (2 ಕೊರಿಂಥ 10:10; 11:6). ಪೌಲನು ಲೋಕದ ಮೇಲೆ ಪ್ರಭಾವವನ್ನು ಹೊಂದಿದ್ದನು ಯಾಕಂದರೆ ಅವನ ಹೃದಯವು ತೀವ್ರವಾದ ಭಾವೋದ್ರೇಕದಲ್ಲಿತ್ತು. ಅವನು ಕ್ರಿಸ್ತನು ಮತ್ತು ಆತನ ಕ್ರೂಜೆಯಲ್ಲಿ ಮುಳುಗಿ ಹೋಗಿದ್ದನು. ಅವನು ತನ್ನನ್ನು ತಾನು ಯಾವುದೇ ಕಾಯ್ದಿರಿಸುವಿಕೆಯಿಲ್ಲದೇ ಇತರರು ಯಾವ ರೀತಿಯ ವ್ಯಕ್ತಿಗಳಾಗಿರಬೇಕು ಎಂದು ಬೇಡಿಕೊಳ್ಳುತ್ತಿದ್ದನೋ ಹಾಗಾಗಲು ತನ್ನನ್ನು ತಾನು ಸಮರ್ಪಿಸಿಕೊಂಡಿದ್ದನು. ಇಂದು ಸಭೆ ಅದರ ಬೋಧಕರು ಮತ್ತು ಪ್ರಸಂಗಿಗಳು ಸತ್ಯವನ್ನು ಅರಿತು ಅದನ್ನು ತಮ್ಮ ಸ್ವಂತ ಜೀವಿತದಲ್ಲಿ ಅಪ್ಪಿಕೊಳ್ಳುವಾಗ ಮತ್ತು ಸತ್ಯವನ್ನು ತನ್ನ ಸಮಾನವಯಸ್ಕರೊಂದಿಗೆ ಉತ್ತಮವಾಗಿ ಮಾತನಾಡುವಾಗ ಆಶೀರ್ವಾದ ಹೊಂದಿದ್ದಾಗಿರುತ್ತದೆ.

### ಆತ್ಮೀಕ ವ್ಯಕ್ತಿಯಾಗಿರುವಾಗ (2:15)

ಕೆಲವು ಪದಗಳು ಕ್ರಿಸ್ತೀಯ ಭಾಷೆಗಿಂತ "ಆತ್ಮೀಕತೆಯಲ್ಲಿ" ಹೆಚ್ಚು ಸಾಮಾನ್ಯವಾಗಿವೆ. ಆತ್ಮೀಕವಾಗಿರುವ ಕ್ರೈಸ್ತರಿಗೆ 1 ಕೊರಿಂಥ 2:15 ಮತ್ತು ಗಲಾತ್ಯ 6:1ರಲ್ಲಿ ಎಚ್ಚರಿಸುತ್ತಾನೆ ಆತ್ಮೀಕರಾಗಿರುವದು ಕ್ರೈಸ್ತರಿಗೆ ಯೋಗ್ಯವಾದ ಗುರಿಯಾಗಿದೆ, ಲೋಕವು ಸರಳವಾಗಿ ನಿಂದಿಸುತ್ತದೆ. ಜನರು ಆತ್ಮೀಕರಾಗಿರುವ ಎಲ್ಲರೂ ಎಂದರೆ ದೈವೀಕರು ಎಂದು ಅಭಿಪ್ರಾಯವಲ್ಲ.

"ಆತ್ಮೀಕತೆ" ಎಂಬ ನಾಮಪದ ಬಹುಶಃ ಉಪಯುಕ್ತವಾಗಿರಬಹುದು, ಅದು ಸತ್ಯವೇದದಲ್ಲಿ ಕಂಡುಬರುವದಿಲ್ಲ. ಸತ್ಯವೇದದ ಲೇಖಕರು ಆತ್ಮೀಕತೆಯು ಅಮೂರ್ತ ಲಕ್ಷಣದ ಅಡಿಯಲ್ಲಿ ದೈವೀಕ ಜೀವಿತದ ಕುರಿತಾಗಿ ಮಾತನಾಡುವದಿಲ್ಲ. "ಅತ್ಮೀಕ" ಎಂಬ ನಾಮ ವಿಶೇಷಣವು ಸಹ ಜನರನ್ನು ವರ್ಣಿಸುವದಕ್ಕೆ ವಿರಳವಾಗಿ ಉಪಯೋಗಿಸಲಾಗುತ್ತದೆ. ವರ (ರೋಮ 1:11) ಅಥವಾ ಧರ್ಮಶಾಸ್ತ್ರ (ರೋಮ 7:14) ಬಹುಶಃ ಆತ್ಮೀಕವಾಗಿರಬಹುದು. ಕೆಲವರು ಆರಾಧಿಸುತ್ತಾರೆ ಮತ್ತು ಆಶೀರ್ವಾದಗಳು ಆತ್ಮೀಕ, ಸತ್ಯದಂತೆ (ರೋಮಾ 12:1; 15:27). ಸತ್ಯವೇದ ಒಬ್ಬ ವ್ಯಕ್ತಿಯನ್ನು ಎಂದಿಗೂ ಪ್ರತ್ಯೇಕಿಸುವದಿಲ್ಲ ಮತ್ತು "ಆತನು ಆತ್ಮೀಕ" ಎಂದು ಹೇಳುವದಿಲ್ಲ, ಸಾಂಧರ್ಭಿಕವಾಗಿದ್ದಾಗ್ಯೂ ಕ್ರೈಸ್ತರು ಎಂಬ ಪದವನ್ನು ಸಾಮುದಾಯಿಕವಾಗಿ ಉಪಯೋಗಿಸುತ್ತದೆ.

ಪೌಲನು ಎಂದಿಗೂ ಒಬ್ಬ ವ್ಯಕ್ತಿಯನ್ನು ಅವನು ಅಥವಾ ಅವಳು ಮಾತನಾಡುವ ವಿಧಾನದ ಮೇಲೆ ಆತ್ಮೀಕನೆಂದು ತನ್ನ ತೀರ್ಪನ್ನು ನೀಡುವದರ ಮೂಲಕ ನಿರ್ಣಯಿಸುವದಿಲ್ಲ. ಆತ್ಮೀಕರಾಗಿರುವದು ಎಂದರೆ ಒಬ್ಬನು ಮಾತಿನಲ್ಲಿ ಎಷ್ಟು ಸಾರಿ ಯೇಸುವಿನ ನಾಮವನ್ನು ಉಪಯೋಗಿಸುತ್ತಾನೆ ಅಥವಾ ಅವನು ಎಷ್ಟು ಸಾರಿ "ಕರ್ತನಿಗೆ

ಸ್ತೋತ್ರ!" ಎಂದು ಹೇಳುತ್ತಾನೆ ಎಂದಲ್ಲ. ಒಬ್ಬ ಆತ್ಮೀಕ ಪುರುಷ ಅಥವಾ ಸ್ತ್ರೀ ವಿಶ್ವಾಸಿಗಳ ಸಮುದಾಯದಲ್ಲಿ ನಿರೀಕ್ಷೆ ಮತ್ತು ಸಂತೋಷವನ್ನು ಕಂಡುಕೊಳ್ಳುತ್ತಾರೆ. ಸಾಮುದಾಯಿಕ ಗುಣ ಲಕ್ಷಣ ಆತ್ಮೀಕತೆಯನ್ನು ಅನುಮತಿಸುತ್ತದೆ. ಆತ್ಮೀಕ ವ್ಯಕ್ತಿಯು ವಿಶ್ವಾಸಾರ್ಹನಾಗಿರುತ್ತಾನೆ. ಅವನು ಪ್ರಾರ್ಥನೆಯ ಸಮಯದಲ್ಲಿ ಸಂತೋಷವನ್ನು ಹುಡುಕುವದನ್ನು ಕಲಿಯುತ್ತಾನೆ ಅಥವಾ ಸ್ನೇಹಿತನಿಗೆ ಸಣ್ಣ ಉಪಕಾರವನ್ನು ಮಾಡುವದನ್ನು ಹುಡುಕುತ್ತಾನೆ. ಕ್ರಿಸ್ತನಲ್ಲಿ ನಂಬಿಕೆ ಆತ್ಮೀಕನ ಜೀವಿತದಲ್ಲಿ ಕೂಡಿಸಿಕೊಳ್ಳುವದಲ್ಲ; ಅದು ಈ ಜೀವಿತದ ಕೇಂದ್ರವಾಗಿದೆ. ಪ್ರಾರ್ಥನೆ ಉಸಿರಾಡುವಷ್ಟೇ ಸಾಮಾನ್ಯವಾಗಿದೆ. ಆತ್ಮೀಕ ವ್ಯಕ್ತಿಯು ಕ್ರಿಸ್ತನ ಕುರಿತು ಒಬ್ಬ ಅಭಿಮಾನಿ ತನ್ನ ಅಚ್ಚುಮೆಚ್ಚಿನ ಆಟದ ತಂಡದ ಕುರಿತು ಮಾತನಾಡುವಷ್ಟು ಸ್ವಾಭಾವಿಕವಾಗಿ ಮಾತನಾಡುತ್ತಾನೆ. ಆತ್ಮೀಕರಾಗಿರುವದೆಂದರೆ ಕ್ರಿಸ್ತನನ್ನು ಧರಿಸಿಕೊಳ್ಳುವದು, ಆತನ ವಾಕ್ಯವನ್ನು ಆತುಕೊಳ್ಳುವದು, ಆತನ ಜನರನ್ನು ಪ್ರೀತಿಸುವದು ಮತ್ತು ಆತನ ಜನರೊಂದಿಗೆ ಆರಾಧಿಸುವದು.

### ಅಂತರಂಗದ ಜ್ಞಾನ (2:15)

ಪೌಲನು ಪ್ರಾಕೃತ ಮನುಷ್ಯ ಮತ್ತು ಆತ್ಮೀಕ ಮನುಷ್ಯನ ಮಧ್ಯದಲ್ಲಿ ಮಾಡಿದ ವ್ಯತ್ಯಾಸ ಕೆಲವು ಆತ್ಮೀಕ ಸತ್ಯಗಳು ಕ್ರಿಸ್ತೀಯ ನಂಬಿಕೆಯ ಒಳಗಿನಿಂದಲೇ ತಿಳಿದುಕೊಳ್ಳುವಂಥವುಗಳಾಗಿವೆ, ಹೊರಗೆ ನಿಂತುಕೊಳ್ಳುವವನು, ದೇವರಿಗೆ ಸಮರ್ಪಿಸಿಕೊಂಡವನಲ್ಲ ಅಥವಾ ಅವನೆಡೆಗೆ ಹಗೆತನವುಳ್ಳವನಾಗಿದ್ದಾನೆ, ಕ್ರಿಸ್ತನಲ್ಲಿ ರಕ್ಷಣೆಯನ್ನು ಕಂಡುಕೊಳ್ಳುವವರು ಏನನ್ನು ತಿಳಿದುಕೊಂಡಿದ್ದಾರೆ ಎಂಬುದನ್ನು ಮಾಡುವದಿಲ್ಲ ಬಹುಶಃ ಮಾಡಲಾಗುವದಿಲ್ಲ.

ಕೆಲವು ಕ್ರೈಸ್ತ ಸತ್ಯಗಳು ಅದರಲ್ಲಿ ಭಾಗವಹಿಸುವದರಿಂದ ಮಾತ್ರ ಗ್ರಹಿಸಲು ಸಾಧ್ಯ, ಇದು ಸತ್ಯವೋ? ಉದಾಹರಣೆಗಾಗಿ, ಒಂದುವೇಳೆ ಆ ವ್ಯಕ್ತಿಯು ಅಧ್ಯಯನ ಮಾಡಲು ಮತ್ತು ಮೀನಿನ ಜಲಪುಪ್ಪಸಗಳು ನೀರಿನಿಂದ ಆಮ್ಲಜನಕವನ್ನು ತೆಗೆದುಕೊಳ್ಳವ ದಿಶೆಯಲ್ಲಿ ಸಂಶೋಧನೆಮಾಡಿದ ಪುಪ್ಪುಸದ ನರಗಳಂತೆ ಈ ಪ್ರಕ್ರಿಯೆಯಲ್ಲಿ ವಿಶ್ವದಲ್ಲಿ-ಜನಪ್ರಿಯ ಪರಿಣಿತರಾಗಿ ವ್ಯಕ್ತಿ ಹೇಗೋ ಮೀನಾಗಲು ಅನುಮತಿಸಿದ್ದಲ್ಲಿ ಮತ್ತು ನಂತರ ಮಾನವ ರೂಪದಲ್ಲಿ ಪರಿವರ್ತನೆ ಹೊಂದಿದ್ದಲ್ಲಿ ಏನು ಪ್ರಯೋಜನ? ಅಂಥಹ ವಿಜ್ಞಾನಿಗೆ ಶತಮಾನಗಳ ವಿಷಯ ಅಧ್ಯಯನ ಮೀನಾಗಿರುವ ಅನುಭವವನ್ನು ಹೊಂದಲು ಒದಗಿಸದಿದ್ದಲ್ಲಿ ಏನು ಪ್ರಯೋಜನ.

ಅದರಂತೆ, ಸತ್ಯವೇದದ ನೈತಿಕತೆಯ ಕುರಿತು ಶೈಕ್ಷಣಿಕ ಚರ್ಚೆ ಅಥವಾ ಐತಿಹಾಸಿಕ ವಿವರಗಳ - ಆಳ, ಅಗಾಧತೆ, ಮತ್ತು ಇರಬೇಕಾದ ರೀತಿಯ ಉಪಯುಕ್ತತೆ - ಕ್ರಿಸ್ತ ನಂಬಿಕೆಗೆ ಪರ್ಯಾಯ ವ್ಯವಸ್ಥೆಯಾಗುವದಿಲ್ಲ ಆಂತರ್ಯದ ಸಮಾಧಾನ, ನಿರೀಕ್ಷೆ. ದುಸ್ತರವಾದ ಕಠಿಣ ಪರಿಸ್ಥಿತಿಯಲ್ಲಿ, ವಿಶ್ವಾಸಿಗಳ ಅನ್ಯೋನ್ಯತೆ ಮತ್ತು ಒಳ್ಳೇತನವನ್ನು ಆಯ್ದುಕೊಳ್ಳುವದರಿಂದ ಹುಟ್ಟುವ ತೃಪ್ತಿ ಇವೆಲ್ಲವುಗಳು ವ್ಯಕ್ತಿಗತ ಸಂಗತಿಗಳಾಗಿರುತ್ತವೆ ಮತ್ತು ಅವುಗಳನ್ನು ಶಬ್ದದಲ್ಲಿ ಹೇಳುವದು ಕಠಿಣ. ಕ್ರೈಸ್ತರು ಅವಿಶ್ವಾಸಿಗಳಿಗೆ ತಮ್ಮ ನಂಬಿಕೆಯ ಆಕರ್ಷಣೆಯ ಕುರಿತಾಗಿ ವಿವರಿಸುವ ಕಷ್ಟವನ್ನು ತೆಗೆದುಕೊಳ್ಳಬೇಕು

ಯಾಕಂದರೆ ಕೆಲವು ಸತ್ಯಗಳನ್ನು ನಂಬಿಕೆಯ ಚಕ್ರದಲ್ಲಿ ಅನುಭವದಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯ.

---

## ಟಿಪ್ಪಣಿಗಳು

[1]Hans-Ruedi Weber, *The Cross: Tradition and Interpretation*, trans. Elke Jessett (London: SPCK, 1979; reprint, Grand Rapids, Mich.: Wm. B. Eerdmans Publishing Co., 1979), 73. [2]Richard E. Oster, Jr., *1 Corinthians*, The College Press NIV Commentary (Joplin, Mo.: College Press Publishing Co., 1995), 81. [3]Sirach 15:14-17; NAB. (This text, also known as "The Wisdom of Ben Sirach" or "Ecclesiasticus," is part of the Apocrypha.) [4]Leon Morris, *The First Epistle of Paul to the Corinthians*, rev. ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 56. [5]Paul S. Minear, "Christ and the Congregation: 1 Corinthians 5—6," *Review and Expositor* 80 (Summer 1983): 349. [6]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 953. [7]The ESV has "interpreting spiritual truths to those who are spiritual." [8]Robert H. Stein, *A Basic Guide to Interpreting the Bible: Playing by the Rules* (Grand Rapids, Mich.: Baker Books, 1994), 66-67.